ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜನವರಿ 13, 2021

ಸಂಪುಟ : 47 ಸಂಚಿಕೆ : 254 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com



## ಕಾರ್ತಿಕ ದೀಪೋತ್ಸವದ ಭಕ್ತಿಯ ಬೆಳಕಲ್ಲಿ 'ನಗರ ದೇವತೆ'

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಮಂಗಳವಾರ ಏರ್ಪಾಡಾಗಿದ್ದ ಕಾರ್ತಿಕ ದೀಪೋತ್ಸವದ ಸಂದರ್ಭದಲ್ಲಿ ಭಕ್ತಾದಿಗಳು ಪಾಲ್ಗೊಂಡು ಶ್ರೀ ದೇವಿ ದರ್ಶನ ಪಡೆದು, ನಂತರ ದೀಪ ಬೆಳಗಿಸುವುದರ ಮೂಲಕ ತಮ್ಮ ಶ್ರದ್ಧಾ-ಭಕ್ತಿ ಸಮರ್ಪಿಸಿದರು.

# ಕೃಷಿ ಕಾಯ್ದೆಗಳಿಗೆ ತಡೆ

## ಚರ್ಚೆಗೆ ಸಮಿತಿ ರಚನೆ, ಸುಪ್ರೀಂ ಕೋರ್ಟ್‌ನಿಂದ ರೈತರ ಪ್ರತಿಭಟನೆ ಬಿಕ್ಕಟ್ಟು ತಡೆಯಲು ಪ್ರಮುಖ ಕ್ರಮ

ನವದೆಹಲಿ, ಜ. 12 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳಿಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ಹೊರಡಿಸಿದ್ದು, ಪ್ರತಿಭಟನಾ ನಿರತ ರೈತರ ಬಿಕ್ಕಟ್ಟು ಬಗೆಹರಿಸಲು ಸಮಿತಿಯೊಂದನ್ನು ರಚಿಸಿದೆ. ಆದರೆ, ಸುಪ್ರಿಂ ಕೋರ್ಟ್ ಕೃಷಿ ಕಾಯ್ದೆ ತಡೆದಿರುವುದನ್ನು ರೈತ ಸಂಘಟನೆಗಳು ಸ್ವಾಗತಿಸಿವೆಯಾದರೂ, ಸಮಿತಿಯಲ್ಲಿರುವ ಎಲ್ಲಾ ನಾಲ್ವರು ಕಾಯ್ದೆ ಪರ ನಿಲುವು ತಳೆದಿರುವವರು ಎಂದು ಆಕ್ಷೇಪಿಸುತ್ತಿವೆ.

ಸಮಿತಿ ರಚನೆ ಹಾಗೂ ಕಾಯ್ದೆ ತಡೆಗಳ ಕ್ರಮದಿಂದಾಗಿ ಪ್ರತಿಭಟನಾ ನಿರತ ರೈತರು ಸಂಧಾನಕ್ಕೆ ಮುಂದೆ ಬರಲು ಉತ್ತೇಜನ ನೀಡಿದಂತಾಗುತ್ತದೆ. ಈ ವಿಷಯ ಬಗೆಹರಿಸಲು ಸಮಿತಿ ಶಿಫಾರಸ್ಸು ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

**ಕೃಷಿ ಕಾಯ್ದೆ ತಡೆದಿರುವುದನ್ನು ರೈತ ಸಂಘಟನೆಗಳು ಸ್ವಾಗತಿಸಿವೆ. ಆದರೆ ಸಮಿತಿಯಲ್ಲಿರುವ ಎಲ್ಲಾ ನಾಲ್ವರು ಕಾಯ್ದೆ ಪರ ನಿಲುವು ತಳೆದಿರುವವರು, ಅವರ ಜೊತೆ ಮಾತನಾಡುವುದಿಲ್ಲ ಎಂದು ತಿಳಿಸಿವೆ.**

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಈ ಬಗ್ಗೆ ಆದೇಶ ಹೊರಡಿಸಿದ್ದು, ಶಾಸನಗಳ ಜಾರಿ ಮೂಲಕ ತೆಗೆದುಕೊಳ್ಳಲಾಗುವ ಕಾರ್ಯಕಾರಿ ಕ್ರಮಗಳಿಗೆ ತಡೆಯಾಜ್ಞೆ ಹೊರಡಿಸಲು ಸುಪ್ರೀಂ ಕೋರ್ಟ್‌ಗೆ ಅಧಿಕಾರವಿದೆ ಎಂದು ತಿಳಿಸಿದೆ.

ರೈತ ಸಂಘಟನೆಗಳು ಹಾಗೂ ಸರ್ಕಾರದ ನಡುವಿನ ಸಂಧಾನ ಇದುವರೆಗೂ ಯಾವುದೇ ಫಲ ನೀಡಿಲ್ಲ. ಕೃಷಿ ವಲಯದ ಪರಿಣಿತರ ಸಮಿತಿ ರಚಿಸುವುದರಿಂದ ಸೌಹಾರ್ದದ ವಾತಾವರಣ ಉಂಟಾಗಲಿದೆ, ಇದರಿಂದ ರೈತರಲ್ಲಿ ವಿಶ್ವಾಸ ಹೆಚ್ಚಾಗಲಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಯನ್ನು ಕಾಯ್ದೆಗಳ ಜಾರಿಗೆ ತರುವ ಮುಂದಿನ ಸ್ಥಿತಿಯಲ್ಲೇ ಉಳಿಸಬೇಕು. ರೈತರ ಜಮೀನುಗಳನ್ನೂ ಸಹ ರಕ್ಷಿಸಬೇಕು. ಯಾವುದೇ ರೈತನ ಜಮೀನನ್ನು ಕೃಷಿ ಕಾಯ್ದೆಗಳ ಮೂಲಕ ವಶಕ್ಕೆ ತೆಗೆದುಕೊಳ್ಳಬಾರದು ಎಂದು ನ್ಯಾಯಾಲಯ ತಿಳಿಸಿದೆ. ನ್ಯಾಯಮೂರ್ತಿಗಳಾದ ಎ. ಎಸ್. ಬೋಪಣ್ಣ ಹಾಗೂ ವಿ. (2ನೇ ಪುಟಕ್ಕೆ)

# ನಾಳೆ ಮಧ್ಯಾಹ್ನ 3.50 ಕ್ಕೆ ಮಂತ್ರಿ ಮಂಡಲ ವಿಸ್ತರಣೆ

ಬೆಂಗಳೂರು, ಜ. 12- ಕೊಟ್ಟ ಭರವಸೆ ಈಡೇರಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಮಂತ್ರಿಮಂಡಲವನ್ನು ನಾಳೆ ಮಧ್ಯಾಹ್ನ 3 ಗಂಟೆ 50 ನಿಮಿಷಕ್ಕೆ ವಿಸ್ತರಣೆ ಮಾಡಲಿದ್ದಾರೆ.

ಹೊಸದಾಗಿ ಸಂಪುಟಕ್ಕೆ ಏಳು ಮಂದಿಯನ್ನು ತೆಗೆದುಕೊಳ್ಳಲು ಮುಖ್ಯಮಂತ್ರಿ ನಿರ್ಧರಿಸಿದ್ದು, ನಾಳೆಯ ವೇಳೆಗೆ ಇನ್ನೂ ಕೆಲವು ಬದಲಾವಣೆಗಳನ್ನು ತಳ್ಳಿ ಹಾಕುವಂತಿಲ್ಲ.

ಸಂಪುಟ ವಿಸ್ತರಣೆಗೆ ಸಮಯಾವಕಾಶ ಕೋರಿ ರಾಜ್ಯಪಾಲರನ್ನು ಇಂದು ಬೆಳಗ್ಗೆ ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ನಾಳೆ ಸಂಜೆ ಸಂಪುಟ ವಿಸ್ತರಿಸುತ್ತಿದ್ದೇನೆ ಎಂದರು.

ಸಂಪುಟ ವಿಸ್ತರಣೆಯೋ, ಪುನರ್ ರಚನೆಯೋ, ಯಾರನ್ನು ಮಂತ್ರಿಮಂಡಲದಿಂದ ಕೈಬಿಡುತ್ತೀರಿ ಎಂಬ ಪತ್ರಕರ್ತರ ಪ್ರಶ್ನೆಗಳ ಸುರಿಮಳೆಗೆ, ಕಾದು ನೋಡಿ, ಅನವಶ್ಯಕವಾಗಿ ಹೆಸರುಗಳನ್ನು ಹೇಳಬೇಡಿ, ಸಾಧ್ಯವಾದರೆ ಇಂದೇ ಪಟ್ಟಿ ಕೊಡುತ್ತೇನೆ ಎಂದು ಉತ್ತರಿಸಿದರು.

ಒಂದು ವೇಳೆ ಸಂಪುಟ ಪುನರ್ ರಚನೆ ಮಾಡಿದಲ್ಲಿ ಅಬಕಾರಿ ಸಚಿವ (2ನೇ ಪುಟಕ್ಕೆ)




# ಲಾಭ ಗಳಿಸಲು ಸಮಗ್ರ ಕೃಷಿ ನೀತಿ ಅಳವಡಿಸಿಕೊಳ್ಳಿ

## ನ್ಯಾಮತಿಯಲ್ಲಿನ 'ರೈತರೊಂದಿಗೆ ಒಂದು ದಿನ' ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್

ದಾವಣಗೆರೆ, ಜ. 12- ಕೃಷಿಯನ್ನು ಲಾಭದಾಯಕವಾಗಿಸಲು ರೈತರು ಸಮಗ್ರ ಕೃಷಿ ನೀತಿ ಅಳವಡಿಕೊಳ್ಳುವುದರ ಜೊತೆಗೆ, ಬೆಳೆ ಸಂಸ್ಕರಣೆ ವ್ಯವಸ್ಥೆ ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ರೈತರಿಗೆ ಕರೆ ನೀಡಿದರು.

ನ್ಯಾಮತಿ ತಾಲ್ಲೂಕು ಕೆಂಚಿಕೊಪ್ಪ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ 'ರೈತರೊಂದಿಗೆ ಒಂದು ದಿನ' ವಿನೂತನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು ನೀರಿದ್ದರೂ ರೈತರ ಆತ್ಮಹತ್ಯೆಗಳು ಸಂಭವಿಸುತ್ತಿವೆ. ಕೋಲಾರದಲ್ಲಿ ಹೆಚ್ಚು ನೀರಿಲ್ಲ. ಆದರೂ ಇಲ್ಲಿ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿಲ್ಲ. ಕಾರಣಗಳನ್ನು ಹುಡುಕಿದಾಗ, ಕೋಲಾರ ಜಿಲ್ಲೆಯ ರೈತರು ಸಮಗ್ರ ಕೃಷಿ ನೀತಿ ಅನುಸರಿಸುತ್ತಿದ್ದಾರೆ. ಇಲ್ಲಿನ ರೈತರು, ಹೆಚ್ಚು, ತರಕಾರಿ, ಹಣ್ಣು ಸೇರಿದಂತೆ ವಿಭಿನ್ನ ಬೆಳೆಗಳನ್ನು ಬೆಳೆದು ಪ್ರಗತಿಪರ ರೈತರು ಎನಿಸಿಕೊಂಡಿದ್ದಾರೆ ಎಂದರು.

ದಾವಣಗೆರೆ ಜಿಲ್ಲೆಯಲ್ಲಿಯೂ ಬಹಳಷ್ಟು ರೈತರು ಭತ್ತ ಬೆಳೆಯುತ್ತಿದ್ದಾರೆ. ಭತ್ತ, ಕಬ್ಬು ನಂಬಿಕೊಂಡವರು ಹೊಟ್ಟೆಬಟ್ಟೆಗಷ್ಟೇ ಆದಾಯ ಕಂಡುಕೊಳ್ಳಬಹುದು. ವಿಭಿನ್ನ ಬೆಳೆ ಬೆಳೆಯುವ ಮೂಲಕ ಕೋಲಾರ ಜಿಲ್ಲೆಯ ರೈತರು ಕೃಷಿ ಮತ್ತು ತೋಟಗಾರಿಕೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

ಸರ್ಕಾರ ಮನೆ ಬಾಗಿಲಿಗೆ ತಲುಪಬೇಕು. ನಿಮ್ಮೊಂದಿಗೆ ನಾವಿದ್ದೇವೆ ಎನ್ನುವ ಸಂದೇಶವನ್ನು ರೈತರಿಗೆ ನಾವು ಕೊಡಬೇಕಿದೆ. ರೈತರಿಗೆ ಆತ್ಮಸ್ಥೈರ್ಯ, ನೈತಿಕ ಬಲ ತುಂಬಬೇಕಿದೆ. ಸರ್ಕಾರ ಮನೆ ಬಾಗಿಲಿಗೆ ಬಂದಿದೆ ಎನ್ನುವ ಭಾವನೆ ಮೂಡುವಂತಾಗಬೇಕು. ರೈತ ಆತ್ಮಹತ್ಯೆ ಮಾಡಿಕೊಳ್ಳಬಾರದು ಎಂಬ ಸಂದೇಶ ಮುಟ್ಟಿಸಬೇಕು.

'ರೈತರೊಂದಿಗೆ ಒಂದು ದಿನ' ಪ್ರತಿ ಜಿಲ್ಲೆಯ ಒಂದು ಗ್ರಾಮದಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದ್ದು, ರೈತರೊಂದಿಗೆ ಸಂವಾದ ನಡೆಸಿ, ಅಲ್ಲಿನ ಮಣ್ಣು, ಸಂಸ್ಕೃತಿ, ಬೆಳೆಯ ಸಂಸ್ಕೃತಿ, ಜನರ ಬೇಕು ಬೇಡಗಳನ್ನು ತಿಳಿದುಕೊಳ್ಳಲು ಯತ್ನಿಸಲಾಗುವುದು. ರೈತರೊಂದಿಗೆ (4ನೇ ಪುಟಕ್ಕೆ)

## ರಾಗಿ ಬೆಳೆದ ರೈತರ ಕೈ ಹಿಡಿದ ಕೇಂದ್ರ



ಬೆಂಗಳೂರು, ಜ. 12-ರಾಜ್ಯದಲ್ಲಿ ಬಂಪರ್ ರಾಗಿ ಬೆಳೆದು ಧಾರಣೆ ಸಿಗದೆ ಕಂಗಾಲಾಗಿದ್ದ ರೈತರನ್ನು ಕೇಂದ್ರ ಸರ್ಕಾರ ಕೈಹಿಡಿದಿದೆ.

ಕೇಂದ್ರ ಸರ್ಕಾರ ಮಾರುಕಟ್ಟೆ ಮಧ್ಯಪ್ರವೇಶಿಸಿ 12 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಲು ಮುಂದಾಗಿದೆ ಎಂದು ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ. ಗೋಪಾಲಯ್ಯ ತಿಳಿಸಿದ್ದಾರೆ. ಇದರಿಂದ ರಾಗಿ ಬೆಳೆಗಾರರ ಸಮಸ್ಯೆ ಸ್ವಲ್ಪ ಕಡಿಮೆಯಾಗಲಿದ್ದು, ಪ್ರಧಾನಿ ನರೇಂದ್ರ ಮೋದಿ ಸರ್ಕಾರ ರೈತರ ನೆರವಿಗೆ ಬಂದಿದೆ ಎಂದರು.

ಕೋವಿಡ್-19ರ ಸಂದರ್ಭದಲ್ಲೂ ಉಚಿತವಾಗಿ ತಲಾ 10 ಕೆ.ಜಿ. (2ನೇ ಪುಟಕ್ಕೆ)

# ಖಾದಿ ಪ್ರಾಕೃತಿಕ ಪೇಂಟ್ ಬಿಡುಗಡೆ

**ಹಸುವಿನ ಸೆಗಣಿ ಹೊಂದಿರುವ ಪೇಂಟ್‌ಗೆ 6 ಸಾವಿರ ಕೋಟಿ ರೂ.ಗಳ ಮಾರುಕಟ್ಟೆ ನಿರೀಕ್ಷೆ : ಗಡ್ಕರಿ**

ನವದೆಹಲಿ, ಜ. 12 – ಹಸುವಿನ ಸೆಗಣಿ ಹೊಂದಿರುವ ಖಾದಿ ಪ್ರಾಕೃತಿಕ ಪೇಂಟ್ ಬಿಡುಗಡೆ ಮಾಡಿರುವ ಕೇಂದ್ರ ಸಚಿವ ನಿತಿನ್ ಗಡ್ಕರಿ, ಈ ಉತ್ಪನ್ನ 6,000 ಕೋಟಿ ರೂ.ಗಳ ಮಾರುಕಟ್ಟೆ ಹೊಂದುವ ಸಾಮರ್ಥ್ಯ ಪಡೆದಿದೆ ಎಂದು ಹೇಳಿದ್ದಾರೆ.

ಪರಿಸರ ಸ್ನೇಹಿ ಹಾಗೂ ಹಾನಿಕಾರಕವಲ್ಲದ ಗೋಡೆ ಬಣ್ಣವನ್ನು ಖಾದಿ ಗ್ರಾಮೋದ್ಯೋಗ ಆಯೋಗ (ಕೆ.ವಿ.ಐ.ಸಿ.) ರೂಪಿಸಿದ್ದು, ಇದನ್ನು ಗಡ್ಕರಿ ಬಿಡುಗಡೆ ಮಾಡಿದ್ದಾರೆ.

ಸರ್ಕಾರದ ಕ್ರಮದಿಂದಾಗಿ ಆತ್ಮನಿರ್ಭರ್ ಭಾರತ್‌ಗೆ ನೆರವಾಗಲಿದೆ ಹಾಗೂ ಗ್ರಾಮೀಣ ಭಾಗದಿಂದ ನಗರಗಳಿಗೆ ಜನರು ವಲಸೆ ಹೋಗುವುದು ತಪ್ಪಲಿದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆ ಬಲವಾಗಿದೆ ಎಂದೂ (4ನೇ ಪುಟಕ್ಕೆ)

## ಸ್ವಾಮಿ ಹರ್ಷಾನಂದ ವಿಧಿವಶ



ಬೆಂಗಳೂರು, ಜ. 13- ಸ್ವಾಮಿ ವಿವೇಕಾನಂದರ ಜನ್ಮದಿನದಂದೇ ಇಲ್ಲಿನ ಬಸವನಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಹರ್ಷಾನಂದ ವಿಧಿವಶರಾಗಿದ್ದಾರೆ.

91 ವರ್ಷ ವಯಸ್ಸಾಗಿದ್ದ ಹರ್ಷಾನಂದ ಅವರಿಗೆ ಮಂಗಳವಾರ ಮಧ್ಯಾಹ್ನ 1.05ರ ವೇಳೆಗೆ ಹೃದಯಾಘಾತವಾಗಿ ಕೊನೆಯುಸಿರೆಳೆದಿದ್ದಾರೆ.

ಹಿಂದೂ ಧರ್ಮದ ಬಗ್ಗೆ ಹರ್ಷಾನಂದ ಅವರು ಹಲವು ಪುಸ್ತಕಗಳನ್ನು ಬರೆದಿದ್ದರು. ಎನ್‌ಸೈಕ್ಲೋಪೀಡಿಯಾ ಆಫ್ ಹಿಂದೂಯಿಸಂ (4ನೇ ಪುಟಕ್ಕೆ)

## ವಿಮಾನಗಳೇರಿ 13 ನಗರ ತಲುಪಿದ ಲಸಿಕೆ

**ಕೊರೊನಾ ಲಸಿಕಾ ಅಭಿಯಾನದೆಡೆ ಬೃಹತ್ ಹೆಜ್ಜೆ**

ನವದೆಹಲಿ, ಜ. 12 – ಕೊರೊನಾ ವಿರುದ್ಧ ಲಸಿಕೆ ನೀಡುವ ಅಭಿಯಾನಕ್ಕೆ ಮಂಗಳವಾರ ಬೃಹತ್ ಕ್ರಮ ತೆಗೆದುಕೊಳ್ಳಲಾಗಿದ್ದು, 56 ಲಕ್ಷ ಲಸಿಕೆಯ ಡೋಸ್‌ಗಳನ್ನು ದೇಶಾದ್ಯಂತ ಇರುವ 13 ನಗರಗಳಿಗೆ ಪುಣೆಯಿಂದ ರವಾನಿಸಲಾಗಿದೆ. ಬಿಗಿ ಭದ್ರತೆಯ ನಡುವೆ ಲಸಿಕೆಗಳನ್ನು ರಾಷ್ಟ್ರ ಮಟ್ಟದ ಹಾಗೂ ರಾಜ್ಯ ಮಟ್ಟದ ಸಂಗ್ರಹಗಾರಗಳಿಗೆ ರವಾನಿಸಲಾಗಿದೆ.

ಜನವರಿ 16ರಂದು ಲಸಿಕೆ ಅಭಿಯಾನ ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ನೀಡುವುದರೊಂದಿಗೆ ಆರಂಭವಾಗಲಿದೆ. ಜನವರಿ 14ರ ಒಳಗೆ ಸೆರಮ್ ಇನ್‌ಸ್ಟಿಟ್ಯೂಟ್‌ನಿಂದ 1.1 ಕೋಟಿ ಕೊವಿಶೀಲ್ಡ್ ಲಸಿಕೆ ಹಾಗೂ ಭಾರತ್ ಬಯೋಟೆಕ್‌ನಿಂದ 55 ಲಕ್ಷ ಕೊವ್ಯಾಕ್ಸಿನ್ ಲಸಿಕೆ ಪಡೆಯುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಸಿರಮ್ (4ನೇ ಪುಟಕ್ಕೆ)



## ಸಾಂಪ್ರದಾಯಿಕ ಭತ್ತದ ಒಕ್ಕಲು ಆರಂಭಿಸಿದ ಕೃಷಿ ಸಚಿವ ಬಿ.ಸಿ. ಪಾಟೀಲ್

ಮೂಲೆ ಸೇರಿದ್ದ ರೋಣುಗಲ್ಲಿಗೆ ಮತ್ತೆ ಚಾಲನೆ ನೀಡುವ ನಿಟ್ಟಿನಲ್ಲಿ ಸಾಂಪ್ರದಾಯಿಕ ಭತ್ತದ ಒಕ್ಕಲನ್ನು ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ಪ್ರಾರಂಭಿಸುವುದರ ಮೂಲಕ ಸಾರ್ವಜನಿಕರ ಗಮನ ಸೆಳೆದರು. ಶಾಸಕ ಎಂ.ಪಿ. ರೇಣುಕಾಚಾರ್ಯ ಸಚಿವರೊಂದಿಗಿದ್ದರು.

**ಸಂದರ್ಭ :** ನ್ಯಾಮತಿ ತಾಲ್ಲೂಕು ಕೆಂಚಿಕೊಪ್ಪ ಗ್ರಾಮದಲ್ಲಿ ಮಂಗಳವಾರ ಏರ್ಪಾಡಾಗಿದ್ದ 'ರೈತರೊಂದಿಗೆ ಒಂದು ದಿನ' ವಿನೂತನ ಕಾರ್ಯಕ್ರಮ.

## ಸಹಕಾರ ಬ್ಯಾಂಕು ಮಹಾಮಂಡಳದ ನಿರ್ದೇಶಕರಾಗಿ ಕೋಗುಂಡಿ ಬಕ್ಕೇಶಪ್ಪ

### ಹೆಚ್.ಕೆ. ಪಾಟೀಲ್ ನೇತೃತ್ವದಲ್ಲಿ 18 ಸ್ಥಾನಕ್ಕೂ ಅವಿರೋಧ ಆಯ್ಕೆ





ಬೆಂಗಳೂರು, ಜ. 12 - ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಮಾಜಿ ಸಚಿವರೂ ಆಗಿರುವ ರಾಜ್ಯದ ಹಿರಿಯ ಸಹಕಾರಿ ಧುರೀಣ ಹೆಚ್.ಕೆ. ಪಾಟೀಲ್ ನೇತೃತ್ವದಲ್ಲಿ ಎಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹೆಚ್.ಕೆ. ಪಾಟೀಲ್ ಅವರ ನೇತೃತ್ವದ ಗುಂಪಿನಲ್ಲಿದ್ದವರ ಪೈಕಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರೂ ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಮುಂದಿನ 5 ವರ್ಷಗಳ ಅವಧಿಗೆ ಇದೇ ದಿನಾಂಕ 17ರಂದು ನಿಗದಿಯಾಗಿದ್ದ ಚುನಾವಣೆಯಲ್ಲಿ ಮಹಾಮಂಡಳದ ಹಾಲಿ ಅಧ್ಯಕ್ಷರೂ ಆಗಿರುವ ಹೆಚ್.ಕೆ. ಪಾಟೀಲ್ ಅವರಲ್ಲದೇ, ಆಡಳಿತ ಮಂಡಳಿಯ ಎಲ್ಲಾ 18 ಸ್ಥಾನಗಳಿಗೂ ಅವಿರೋಧ ಆಯ್ಕೆಯಾಗಿದೆ ಎಂದು ಘೋಷಿಸಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಪಟ್ಟಣ ಬ್ಯಾಂಕುಗಳಿಗೆ ಕ್ಷೇಮಾಭಿವೃದ್ಧಿಯ ಪ್ರಾತಿನಿಧಿಕ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಆಡಳಿತ ಮಂಡಳಿಯಲ್ಲಿ 2-3 ಜಿಲ್ಲೆಗೊಬ್ಬರಂತೆ ನಿರ್ದೇಶಕರಿದ್ದಾರೆ. (2ನೇ ಪುಟಕ್ಕೆ)

## ಬೇತೂರು ಗ್ರಾಮದ ಎಂ.ಎಸ್. ಶ್ರೀಧರ್ ನಿಧನ



ದಾವಣಗೆರೆ ಸಮೀಪದ ಬೇತೂರು ಗ್ರಾಮದ ವಾಸಿ, ದಿ|| ಪರಮಶಿವಯ್ಯ ಇವರ ಪುತ್ರ **ಶ್ರೀ ಎಂ.ಎಸ್. ಶ್ರೀಧರ್** ಬಿ.ಇ. ಟೆಕ್ಸ್‌ಟೈಲ್ ಇಂಜಿನಿಯರ್ ಅವರು ದಿನಾಂಕ 12.01.2020ರ ಮಂಗಳವಾರ ರಾತ್ರಿ 11.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 38 ವರ್ಷ ವಯಸ್ಸಾಗಿತ್ತು. ತಾಯಿ, ಪತ್ನಿ, ಓರ್ವ ಪುತ್ರ, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.01.2020ರ ಬುಧವಾರ ಮಧ್ಯಾಹ್ನ 12.30 ಗಂಟೆಗೆ ಬೇತೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ, ಮೊ. 8618087402

## ಗಣರಾಜ್ಯೋತ್ಸವದ ಅಡ್ಡಿ, ವಿರೋಧದ ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ

ನವದೆಹಲಿ, ಜ. 12 – ಮುಂಬರುವ ಜನವರಿ 26ರ ಗಣರಾಜ್ಯೋತ್ಸವಕ್ಕೆ ಅಡ್ಡಿ ಪಡಿಸುವ ಟ್ರ್ಯಾಕ್ಟರ್ ರ್‍ಯಾಲಿ ಸೇರಿದಂತೆ ಯಾವುದೇ ಕಾರ್ಯಕ್ರಮವನ್ನು ತಡೆಯಬೇಕೆಂದು ಕೇಂದ್ರ ಸರ್ಕಾರ ದಾಖಲಿಸಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ದೆಹಲಿ ಪೊಲೀಸರ ಮೂಲಕ ಅರ್ಜಿ ದಾಖಲಿಸಿರುವ ಕೇಂದ್ರ ಸರ್ಕಾರ, ಗಣರಾಜ್ಯೋತ್ಸವ ಸಮಾರಂಭಕ್ಕೆ ಅಡ್ಡಿಪಡಿಸುವ ಯಾವುದೇ ಪ್ರತಿಭಟನೆ ನಡೆಸುವುದು ದೇಶದ ಮುಜುಗರಕ್ಕೆ ಕಾರಣವಾಗಲಿದೆ ಎಂದು ಹೇಳಿದೆ.

ದೇಶವನ್ನು ಜಾಗತಿಕವಾಗಿ ತೇಜೋವಧೆ ಮಾಡುವುದು ಎಂದೂ ಪ್ರತಿಭಟಿಸುವ ಹಕ್ಕಿನಲ್ಲಿ ಸೇರಿಲ್ಲ. ಯಾರಾದರೂ ಆ ರೀತಿಯ ಪ್ರತಿಭಟನೆ ನಡೆಸಿದರೆ ಸುಪ್ರೀಂ ಕೋರ್ಟ್ ತಡೆಯಬೇಕು ಎಂದು ಕೇಂದ್ರ ಸರ್ಕಾರ ಅರ್ಜಿ ದಾಖಲಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಅರ್ಜಿಯನ್ನು ಪರಿಶೀಲಿಸಲು ಸಮರ್ಥಿಸಿದ್ದು, ಪ್ರತಿಭಟನಾ ನಿರತ ರೈತ ಸಂಘಟನೆಗಳಿಗೆ ನೋಟಿಸ್ ಕಳಿಸಿದೆ

ಸೀಮಿತ ಸಂಖ್ಯೆಯ ಕೆಲವರು ಹಾಗೂ ಕೆಲ ಸಂಘಟನೆಗಳು ಗಣರಾಜ್ಯೋತ್ಸವದ ದಿನದಂದು ಟ್ರ್ಯಾಕ್ಟರ್ ರ್‍ಯಾಲಿ ನಡೆಸಲು ನಿರ್ಧರಿಸಿರುವುದು ಭದ್ರತಾ ಸಂಸ್ಥೆಗಳ ಗಮನಕ್ಕೆ ಬಂದಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

# ನಾಳೆ ಮಧ್ಯಾಹ್ನ ಮಂತ್ರಿ ಮಂಡಲ ವಿಸ್ತರಣೆ

**(1ನೇ ಪುಟದಿಂದ)** ಎಚ್. ನಾಗೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ, ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆಗಳಿವೆ.

ಜೆಡಿಎಸ್-ಕಾಂಗ್ರೆಸ್ ಸರ್ಕಾರ ಪತನಗೊಳಿಸಿ ತಮ್ಮ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಕಾರಣರಾದವರಿಗೆ ನೀಡಿದ ಭರವಸೆಯನ್ನು ಮುಖ್ಯಮಂತ್ರಿ ಒಂದೂವರೆ ವರ್ಷದೊಳಗೆ ಈಡೇರಿಸುತ್ತಿದ್ದಾರೆ. ಈಗಾಗಲೇ ಎರಡು ಹಂತಗಳಲ್ಲಿ ಮಂತ್ರಿಮಂಡಲ ವಿಸ್ತರಣೆ ಮಾಡಿದ್ದು, ಈ ಸಂದರ್ಭದಲ್ಲಿ ಸರ್ಕಾರ ರಚನೆಗೆ ಕಾರಣಕರ್ತರಾದ ಕೆಲವರಿಗೆ ಮಂತ್ರಿ ಪದವಿ ನೀಡಿದ್ದಾರೆ.

ಇತ್ತೀಚೆಗೆ ನಡೆದ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ವಿಜೇತರಾದ ಮುನಿರತ್ನ ನಾಯ್ಡು, ವಿಧಾನ ಪರಿಷತ್ ಸದಸ್ಯ ಎಂ.ಟಿ.ಬಿ. ನಾಗರಾಜ್, ಆರ್. ಶಂಕರ್, ಸಿ.ಪಿ. ಯೋಗೇಶ್ವರ್, ಅವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ಮೂಲಕ ಯಡಿಯೂರಪ್ಪ, ಇವರುಗಳಿಗೆ ನೀಡಿದ್ದ ಭರವಸೆಯನ್ನು ಈಡೇರಿಸುತ್ತಿದ್ದಾರೆ. ಇವರ ಜೊತೆ ಮೂಲ ಬಿಜೆಪಿಯ 20ಕ್ಕೂ ಹೆಚ್ಚು ಶಾಸಕರು ಉಳಿದ ಮೂರು ಸ್ಥಾನಗಳಿಗೆ ಹೋರಾಟ ನಡೆಸಿದ್ದಾರೆ. ಇವರಲ್ಲಿ ಉಮೇಶ್ ಕತ್ತಿ, ಅರವಿಂದ್ ಲಿಂಬಾವಳಿ ಹಾಗೂ ಮುರುಗೇಶ್ ನಿರಾಣಿ ಮಂತ್ರಿಯಾಗುವುದು ಬಹುತೇಕ ಖಚಿತ.

ಉಳಿದಂತೆ ಡಾ. ಹಾಲಪ್ಪ ಆಚಾರ್, ಸುನೀಲ್ ಕುಮಾರ್, ಅಂಗಾರ ಸೇರಿದಂತೆ ಘಟಾನುಘಟಿಗಳು ಮಂತ್ರಿಮಂಡಲ ಸೇರಲು ಕಸರತ್ತು ನಡೆಸಿದ್ದಾರೆ.

ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹಾಗೂ ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್ ಅವರಿಬ್ಬರನ್ನು ಹೊರತುಪಡಿಸಿದರೆ ಉಳಿದವರೆಲ್ಲರಿಗೂ ಯಡಿಯೂರಪ್ಪ ನೀಡಿದ್ದ ಭರವಸೆಯನ್ನು ಈಡೇರಿಸಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪಿನಂತೆ ಚುನಾವಣೆ ಗೆಲ್ಲದೆ ಸಚಿವರಾಗುವ ಅವಕಾಶದಿಂದ ವಿಶ್ವನಾಥ್ ವಂಚಿತರಾದರು.

ಮಸ್ಕಿ ವಿಧಾನಸಭಾ ಕ್ಷೇತ್ರಕ್ಕೆ ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಪ್ರತಾಪ್ ಗೌಡ ಪಾಟೀಲ್‌ಗೆ ಯಡಿಯೂರಪ್ಪ ನೀಡಿದ ಭರವಸೆ ಈಡೇರಿಸಲಾಗುತ್ತಿಲ್ಲ. ಸಂಪುಟ ವಿಸ್ತರಣೆಗಾಗಿ ಮುಖ್ಯಮಂತ್ರಿ ಮೂರು ಬಾರಿ ದೆಹಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಬಂದಿದ್ದರು.

ಕಳೆದ ಭಾನುವಾರ ದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಪಕ್ಷದ ಇತರೆ ವರಿಷ್ಠರನ್ನು ಭೇಟಿ ಮಾಡಿ ಕೊನೆಗೂ ಸಂಪುಟ ವಿಸ್ತರಣೆಗೆ ಅವಕಾಶ ಪಡೆದು ನಾಳೆ ವಿಸ್ತರಣೆ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಸಂಪುಟದಲ್ಲಿ 27 ಸದಸ್ಯರಿದ್ದು, ವಿಧಾನಸಭೆಯ ಸಂಖ್ಯಾಬಲದ ಆಧಾರದ ಮೇಲೆ ಇನ್ನೂ ಏಳು ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಬಹುದಾಗಿದೆ.

## ರಾಣೇಬೆನ್ನೂರಿನಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಮುಖ್ಯೋಪಾಧ್ಯಾಯರ ಸಭೆ



ರಾಣೇಬೆನ್ನೂರು, ಜ.12- ಆರ್‌ಟಿಇ ಶುಲ್ಕ ಮರುಪಾವತಿ ತಂತ್ರಾಂಶವನ್ನು ದಿನಾಂಕ 4 ರಂದು ಬಿಡುಗಡೆ ಮಾಡಿದ್ದು, ಈ ಕುರಿತಂತೆ ಆರ್‌ಟಿಇ ನೋಡಲ್ ಅಧಿಕಾರಿ ಶ್ರೀಮತಿ ಡಿ.ಬಿ. ಸುನಿತಾ ಅವರು ಇಲ್ಲಿನ ಆರ್‌ಟಿಇಎಸ್ ಕಾಲೇಜಿನ ಸಭಾಂಗಣದಲ್ಲಿ ಖಾಸಗಿ ಅನುದಾನ ರಹಿತ ಶಾಲಾ ಮುಖ್ಯೋಪಾಧ್ಯಾಯರ ಸಭೆಯನ್ನು ನಡೆಸಿದರು.

ಸಭೆಯಲ್ಲಿ ಭಾಗವಹಿಸಿ, ಆರ್‌ಟಿಇ ತಂತ್ರಾಂಶ ಬಳಕೆ ಕುರಿತು ರಾಣೇಬೆನ್ನೂರಿನ ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಜೆ.ಗುರುಪ್ರಸಾದ್ ಅವರು ಮಾಹಿತಿ ನೀಡಿದರು. ನೋಡೆಲ್ ಅಧಿಕಾರಿಗಳಾದ ಡಿ.ಬಿ.ಸುನಿತಾ ಮಾತನಾಡಿ, ಪ್ರಸ್ತುತ ಸಾಲಿನ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು ಮತ್ತು ವಿಳಂಬಕ್ಕೆ ಅವಕಾಶ ನೀಡಬಾರದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್‌ಟಿಇಎಸ್ ಸಂಸ್ಥೆಯ ಮುಖ್ಯಸ್ಥ ಸುಭಾಷ್ ಸಾಹುಕಾರ್ ಹಾಗೂ ಶಿಕ್ಷಣ ಸಂಯೋಜಕ ಚಂದ್ರು ದೇವಾಂಗ ಹಾಜರಿದ್ದರು.

# ಬೆಂಗಳೂರಿಗೆ ಬಂದ ಕೊರೊನಾ ಲಸಿಕೆ



ಬೆಂಗಳೂರು, ಜ. 12- ಮಹಾಮಾರಿ ಕೊರೊನಾ ನಿಯಂತ್ರಣಕ್ಕೆ ಕೊನೆಗೂ ಲಸಿಕೆ ರಾಜ್ಯಕ್ಕೆ ಬಂದಿತು.

ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ 7.95 ಲಕ್ಷ ಡೋಸ್ ಲಸಿಕೆ ಪ್ರಥಮ ಹಂತದಲ್ಲಿ ಬೆಂಗಳೂರನ್ನು ತಲುಪಿದೆ.

ಲಸಿಕೆ ಈ ತಿಂಗಳ 16 ರಿಂದ ಆರೋಗ್ಯ ಕಾರ್ಯಕರ್ತರಿಗೆ ಮೊದಲ ಹಂತದಲ್ಲಿ ನೀಡಲಾಗುತ್ತಿದೆ.

ಕೇಂದ್ರ ಸರ್ಕಾರ ರಾಜ್ಯಕ್ಕೆ ನಿಗದಿ ಪಡಿಸಿರುವ 13.95 ಲಕ್ಷ ಡೋಸ್‌ಗಳಲ್ಲಿ ಉಳಿದ ಭಾಗ ಸದ್ಯದಲ್ಲೇ ಬರಲಿದೆ.

ಪುಣೆಯಿಂದ ಏರ್ ಜೆಟ್‌ವೇಸ್ ಮೂಲಕ ಇಂದು ಮಧ್ಯಾಹ್ನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 54 ಕೋಲ್ಡ್ ಸ್ಟೋರೇಜ್ ಪೆಟ್ಟಿಗೆಗಳಲ್ಲಿ ಲಸಿಕೆ ಬಂದಿಳಿಯುತ್ತಿದ್ದಂತೆ ಆರೋಗ್ಯ ಇಲಾಖೆ ಪೆಟ್ಟಿಗೆಗಳನ್ನು ಇದಕ್ಕಾಗಿ ಮೀಸಲಿಟ್ಟಿದ್ದ ಕಂಟೈನರ್‌ನಲ್ಲಿ ನಗರದ ಆನಂದ್ ರಾವ್ ವೃತ್ತದ ಬಳಿಯಿರುವ ಶೈತ್ಯಾಗಾರಕ್ಕೆ ರವಾನಿಸಿತು.

ಎರಡನೇ ಹಂತದಲ್ಲಿ ಬರಲಿರುವ ಲಸಿಕೆ ಹುಬ್ಬಳ್ಳಿ ಅಥವಾ ಕಲಬುರಗಿಯ ಆರೋಗ್ಯ ಶೀಥಲೀಕರಣ ಘಟಕಗಳಿಗೆ ಪುಣೆಯಿಂದ ನೇರವಾಗಿ ತಲುಪಲಿದೆ.

ಜಿಲ್ಲಾಧಿಕಾರಿಗಳ ಪ್ರಕಾರ, ಎಲ್ಲಾ ಜಿಲ್ಲೆಗಳಿಗೆ ಬೆಂಗಳೂರು, ಕಲಬುರಗಿ ಮತ್ತು ಹುಬ್ಬಳ್ಳಿ ಕೇಂದ್ರಗಳಿಂದ ರವಾನೆಯಾಗಲಿದೆ.

ಮನುಕುಲಕ್ಕೆ ಮಾರಕವಾಗಿರುವ ಕೊರೊನಾ ಸೋಂಕು ವಿರುದ್ಧದ ದೇಶದ ಹೋರಾಟ ಇದೀಗ ನಿರ್ಣಾಯಕ ಹಂತ ತಲುಪಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ, ಸೋಂಕು ನಿಯಂತ್ರಣಕ್ಕೆ ಈ ತಿಂಗಳ 16 ರಿಂದ ಲಸಿಕೆ ನೀಡಲಾಗುವುದು ಎಂಬುದಾಗಿ ಹೇಳಿದ ಬೆನ್ನಲ್ಲೇ ಇಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ಬೆಂಗಳೂರು ಸೇರಿದಂತೆ, ದೇಶದ 13 ಕೇಂದ್ರಗಳಿಗೆ ಲಸಿಕೆ ರವಾನೆಯಾಯಿತು.

ಇಂದು ಬೆಳಗ್ಗೆಯೇ ಪುಣೆಯ ಸೀರಂ ಸಂಸ್ಥೆಯಿಂದ ಲಸಿಕೆಗಳನ್ನು ಪುಣೆ ವಿಮಾನ ನಿಲ್ದಾಣಕ್ಕೆ ಟ್ರಕ್‌ಗಳಲ್ಲಿ ಎರಡರಿಂದ ಮೂರು ಡಿಗ್ರಿಯ ಶೀಥಲೀಕೃತ ಪೆಟ್ಟಿಗೆಗಳಲ್ಲಿ ಸಾಗಿಸಲಾಯಿತು.

ರಾಜ್ಯಕ್ಕೆ ಲಸಿಕೆ ಬಂದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ಕೋವಿಶೀಲ್ಡ್ ಲಸಿಕೆಯ ತುರ್ತು ಬಳಕೆಗೆ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ ಪರವಾನಗಿ ನೀಡುತ್ತಿದ್ದಂತೆ, ಕೇಂದ್ರ ಸರ್ಕಾರ 1.1 ಕೋಟಿ ಡೋಸ್ ಲಸಿಕೆ ಖರೀದಿ ಮಾಡಿದ್ದು, ಒಂದು ಡೋಸ್‌ಗೆ 210 ರೂ. ನಿಗದಿ ಪಡಿಸಿದೆ ಎಂದರು.

ಇಷ್ಟು ಕಡಿಮೆ ದರವನ್ನು ಬೇರೆ ಯಾವ ದೇಶವೂ ನಿಗದಿ ಮಾಡಿಲ್ಲ, ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ ಲಸಿಕೆ ಖರೀದಿಸಲಾಗಿದೆ.

ಲಸಿಕೆ ಖರೀದಿಗೆ ಒಟ್ಟು 231 ಕೋಟಿ ರೂ. ಖರ್ಚು ಮಾಡಲಾಗಿದೆ. ರಾಜ್ಯಕ್ಕೆ ಮೊದಲ ಹಂತದಲ್ಲಿ 7.95 ಲಕ್ಷ ಕೋವಿಶೀಲ್ಡ್ ಲಸಿಕೆಯ ವಾಯಿಲ್ ಪೂರೈಕೆಯಾಗಲಿದೆ ಎಂದರು.

ಪ್ರತಿ ವಾಯಿಲ್‌ನಲ್ಲಿ 0.5 ಎಂಎಲ್ ಲಸಿಕೆ ಇರುತ್ತದೆ, ಇದನ್ನು 10 ಮಂದಿಗೆ ನೀಡಬಹುದಾಗಿದೆ.

ಮೊದಲ ಡೋಸ್ ಪಡೆದ 28 ದಿನಗಳ ಬಳಿಕ ಎರಡನೇ ಡೋಸ್ ಪಡೆಯಬೇಕು. ಲಸಿಕೆಯಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ಉತ್ಪತ್ತಿಯಾಗುತ್ತದೆ, ಇದು ಸಂಪೂರ್ಣ ಸುರಕ್ಷಿತ ಎಂದರು.

ಲಸಿಕೆ ಮಾರಾಟ ಮಾಡುವಂತಿಲ್ಲ ಎಂಬುದಾಗಿ ಲಸಿಕೆಯ ವಾಯಿಲ್ ಮೇಲೆಯೇ ಮುದ್ರಿಸಲಾಗಿದೆ, ಆರೋಗ್ಯ ಕ್ಷೇತ್ರದ ಸಿಬ್ಬಂದಿ, ಕೊರೊನಾ ನಿಯಂತ್ರಣ ಮಾಡುವ ಅಧಿಕಾರಿ, ಸಿಬ್ಬಂದಿಗೆ ಮೊದಲು ಲಸಿಕೆ ನೀಡಲಾಗುತ್ತದೆ. ಈ ಎಲ್ಲ ಪ್ರಕ್ರಿಯೆ ಕೇಂದ್ರದ ಮಾರ್ಗಸೂಚಿ ಪ್ರಕಾರ ನಡೆಯಲಿದೆ ಎಂದರು.

## ಮಕ್ಕಳ ಲೋಕದಲ್ಲಿ ದಾನಿಗಳಿಂದ ಅನ್ನ ದಾನ

ದಾವಣಗೆರೆ, ಜ.12- ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಬಡ ಮಕ್ಕಳಿಗೆ ಡಾ. ಚರಿತಾ ಮೂರ್ತಿ ಹಾಗೂ ಕುಟುಂಬದವರು ಅನ್ನದಾನ ಕಾರ್ಯಕ್ರಮ ಏರ್ಪಡಿಸಿದ್ದರು.

ಚರಿತಾ ಅವರು ತಮ್ಮ ತಂದೆ ದಿ. ಸತ್ಯನಾರಾಯಣ ಶ್ರೇಷ್ಠಿ ಅವರ ಸ್ಮರಣಾರ್ಥ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮಕ್ಕಳಲೋಕ ಸಂಸ್ಥಾಪಕ ಕೆ.ಎನ್. ಸ್ವಾಮಿ ಚರಿತಾ ಅವರಿಗೆ ಅಭಿನಂದನೆ ಸಲ್ಲಿಸಿದರು. ಕರ್ನಾಟಕ ಜಾನಪದ ಅಕಾಡೆಮಿ ನೂತನ ಸದಸ್ಯರಾದ ಶ್ರೀಮತಿ ಸಿ.ಕೆ. ರುದ್ರಾಕ್ಷಿ ಬಾಯಿ ಮಕ್ಕಳಿಗೆ ಶಾಸ್ತ್ರೀಯ ಸಂಗೀತ, ಜನಪದ ಸಂಗೀತ, ಭಕ್ತಿ ಗೀತೆಗಳನ್ನು ಹೇಳಿಕೊಟ್ಟರು.

ನಿರ್ದೇಶಕರಾದ ಬಸವನಬಾಗೇವಾಡಿ ರುಕ್ಮಾಬಾಯಿ ಹಾಡಿದರು. ಸಂಸ್ಥೆ ಅಧ್ಯಕ್ಷ ಚಿನ್ನಸಮುದ್ರದ ಎನ್. ಪುಟ್ಯಾನಾಯ್ಕ ಅಧ್ಯಕ್ಷತೆ ವಹಿಸಿದ್ದರು. ಮಕ್ಕಳ ಲೋಕದಲ್ಲಿ ಐವರು ಮಕ್ಕಳ ಹುಟ್ಟುಹಬ್ಬ ನಡೆದಿದ್ದು, ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

## ನಗರದಲ್ಲಿ ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಯ ಉಚಿತ ತರಬೇತಿಯು ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ಇಂದು ನಡೆಯಲಿದೆ. ವಿವರಕ್ಕೆ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ, ದಾವಣಗೆರೆ ದೂ.ಸಂ: 08192-233787 ನ್ನು ಸಂಪರ್ಕಿಸಬಹುದು.

## ಹರಿಹರ ವೃತ್ತ ನಿರೀಕ್ಷಕರಾಗಿ ಸತೀಶ್ ಕುಮಾರ್



ಹರಿಹರ, ಜ.12 - ಸಮಾಜದಲ್ಲಿ ಶಾಂತಿ ನೆಲೆಸಲು ಪ್ರತಿಯೊಬ್ಬರೂ ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಬೇಕೆಂದು ನೂತನ ವೃತ್ತ ನಿರೀಕ್ಷಕ ಯು. ಸತೀಶ್ ಕುಮಾರ್ ಹೇಳಿದರು.

ಹರಿಹರ ತಾಲ್ಲೂಕಿಗೆ ವೃತ್ತ ನಿರೀಕ್ಷಕರಾಗಿ ಅಧಿಕಾರ ವಹಿಸಿಕೊಂಡು ಮಾತನಾಡಿದ ಅವರು, ಇಸ್ಪೀಟ್, ಜೂಜಾಟ, ಮಟ್ಕಾ, ಕಳ್ಳತನ, ದೊಂಬಿ, ಗಲಾಟೆ, ಸಮಾಜ ಘಾತುಕ ಪ್ರಕರಣಗಳನ್ನು ತಡೆಗಟ್ಟಲು ಪ್ರತಿಯೊಬ್ಬ ನಾಗರಿಕರು ಪೊಲೀಸ್ ಇಲಾಖೆಯೊಂದಿಗೆ ಕೈ ಜೋಡಿಸಿದಾಗ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂದರು.

ಚನ್ನಗಿರಿ, ಹಿರಿಯೂರು ಗ್ರಾಮಾಂತರ,ಇತರೆ ಗ್ರಾಮಗಳಲ್ಲಿ ಪಿಎಸ್ಸೈ ಯಾಗಿ ಕರ್ತವ್ಯಗಳನ್ನು ನಿರ್ವಹಿಸಿ, ದಾವಣಗೆರೆ ಡಿಎಸ್‌ಪಿ ವಿಭಾಗದಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ಅವರು ಹೇಳಿದರು.

ಈ ಹಿಂದೆ 1 ವರ್ಷಗಳ ಕಾಲ ಹರಿಹರದಲ್ಲಿ ವೃತ್ತ ನಿರೀಕ್ಷಕರಾಗಿ ಎಂ. ಶಿವಪ್ರಸಾದ್ ಅವರು ಸೇವೆ ಸಲ್ಲಿಸಿ ದಾವಣಗೆರೆಗೆ ವರ್ಗಾವಣೆಯಾಗಿದ್ದಾರೆ.

ಮಲೇಬೆನ್ನೂರು ಪಿಎಸ್ ಐ ವೀರಬಸಪ್ಪ ಕುಸಲಾಪುರ, ಹರಿಹರ ಗ್ರಾಮಾಂತರ ಠಾಣೆಯ ಪಿಎಸ್ ಐ ಡಿ. ರವಿಕುಮಾರ್, ನಗರ ಠಾಣೆ ಪಿಎಸ್ ಐ ಸುನಿಲ್ ಬಸವರಾಜ ತೇಲಿ ನೂತನ ವೃತ್ತ ನಿರೀಕ್ಷಕರನ್ನು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳಾದ ಲಿಂಗರಾಜ್, ಕರಿಯಪ್ಪ, ಎಸ್. ಶಿವರಾಜ್, ಟಿ.ವಿ. ಸತೀಶ್, ಜೆ. ಶಿವಕುಮಾರ್, ಇಲಿಯಾಸ್ ಅಹ್ಮದ್, ನಾಗರಾಜ್, ಮುರಳೀಧರ ವಿ.ವಿ, ಸಿದ್ದಣ್ಣ, ನೇತ್ರಾವತಿ, ಸುಜಾತ ಹಾಗೂ ಇತರರು ಹಾಜರಿದ್ದರು.

## ಮಹಾಮಂಡಳದ ನಿರ್ದೇಶಕರಾಗಿ ಬಕ್ಕೇಶಪ್ಪ

**(1ನೇ ಪುಟದಿಂದ)** ಈ ಹಿನ್ನೆಲೆಯಲ್ಲಿ ರಚಿಸಲಾಗಿದ್ದ ಒಟ್ಟು 14 ವರ್ಗಗಳ ಪೈಕಿ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನೊಳಗೊಂಡಿರುವ 'ಹೆಚ್' ಗುಂಪಿನಿಂದ ಏಕೈಕ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕೋಗುಂಡಿ ಬಕ್ಕೇಶಪ್ಪ ಅವರ ಆಯ್ಕೆ ಮೊದಲ ಹಂತದಲ್ಲೇ ಅವಿರೋಧವಾಗಿ ನಡೆಯಿತು.

ಈ ಮಹಾಮಂಡಳದ ಅಧ್ಯಕ್ಷರಾಗಿ ಸುಮಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹೆಚ್.ಕೆ. ಪಾಟೀಲ್ ಅವರು ಇದೀಗ ಮತ್ತೊಂದು ಅವಧಿಗೆ ಆಯ್ಕೆಯಾಗಿದ್ದು, ಅವರೊಂದಿಗೆ ಕೋಗುಂಡಿ ಬಕ್ಕೇಶಪ್ಪ ಅವರು ಸತತ ಎರಡನೇ ಬಾರಿಗೆ ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯಕ ಆಯುಕ್ತ (ಆಡಳಿತ -1) ಡಾ. ಬಿ.ಆರ್. ಹರೀಶ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವನ್ನು ಸುಮಾರು 5 ದಶಕಗಳ ಹಿಂದೆ ಅಂದಿನ ಸಹಕಾರಿ ಧುರೀಣರಾಗಿದ್ದ ಎಸ್. ಕೊಟ್ರಬಸಪ್ಪ ಅವರ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಸ್ಥಾಪನೆಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. ನಂತರದ ದಿನಗಳಲ್ಲಿ ಮಹಾಮಂಡಳದ ಕೇಂದ್ರ ಸ್ಥಾನವು ರಾಜಧಾನಿ ಬೆಂಗಳೂರಿಗೆ ಸ್ಥಳಾಂತರಗೊಂಡಿತ್ತು. ಇದೀಗ ಈ ಮಹಾಮಂಡಳವು ಕರ್ನಾಟಕದ ಎಲ್ಲಾ ಸಹಕಾರ ಪಟ್ಟಣ ಬ್ಯಾಂಕುಗಳ ಸದಸ್ಯತ್ವ ಹೊಂದಿದ್ದು, ಬೃಹತ್ ಮಟ್ಟದಲ್ಲಿ ಬೆಳೆದು ನಿಂತಿದೆ. ಬೆಂಗಳೂರು ಮಾತ್ರವಲ್ಲದೇ, ಬೆಳಗಾವಿಯಲ್ಲಿ ಕೋಟ್ಯಾಂತರ ರೂ.ಗಳ ಬೃಹತ್ ವಾಣಿಜ್ಯ ಕಟ್ಟಡಗಳನ್ನು ಹೊಂದಿದೆ. ಇದು ದಾವಣಗೆರೆ ನಗರ - ಜಿಲ್ಲೆಗೆ ಕೀರ್ತಿ ತರುವಂತಾಗಿದೆ.

## ಕೃಷಿ ಕಾಯ್ದೆಗಳಿಗೆ ತಡೆ

**(1ನೇ ಪುಟದಿಂದ)** ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ಈ ಬಗ್ಗೆ 11 ಪುಟಗಳ ಮಧ್ಯಂತರ ಆದೇಶ ಹೊರಡಿಸಿದೆ.

ನಾವು ಶಾಂತಿಯುತ ಪ್ರತಿಭಟನೆಗೆ ಅಡ್ಡಿಪಡಿಸುವುದಿಲ್ಲ. ಕಾಯ್ದೆಗಳ ಜಾರಿ ತಡೆಯುವ ಅಸಾಧಾರಣ ಆದೇಶ ಹೊರಡಿಸುವ ಕ್ರಮ ಪ್ರತಿಭಟನಾಕಾರರ ಉದ್ದೇಶದ ಸಾಧನೆ ಎಂದು ಪ್ರಸಕ್ತ ಮಟ್ಟಿಗಾದರೂ ಭಾವಿಸಬಹುದಾಗಿದೆ. ಇದರಿಂದ ರೈತ ಸಂಘಟನೆಗಳು ತಮ್ಮ ಸದಸ್ಯರ ಮನವೊಲಿಸಿ ಅವರು ತಮ್ಮ ಕೆಲಸ ಕಾರ್ಯಗಳಿಗೆ ಮನವೊಲಿಸುವಂತೆ ಮಾಡಬಹುದಾಗಿದೆ. ಎರಡೂ ಆದೇಶಗಳು ರೈತರ ಜೀವನ ಹಾಗೂ ಆರೋಗ್ಯವನ್ನು ರಕ್ಷಿಸುತ್ತವೆ. ಇವು ಇತರರ ಜೀವ ಹಾಗೂ ಆಸ್ತಿಗಳನ್ನೂ ಕಾಪಾಡುತ್ತವೆ ಎಂದು ನ್ಯಾಯಾಲಯ ಹೇಳಿದೆ.

ಸಮಿತಿಯಲ್ಲಿ ಭಾರತೀಯ ಕಿಸಾನ್ ಯೂನಿಯನ್ ರಾಷ್ಟ್ರೀಯ ಅಧ್ಯಕ್ಷ ಭೂಪಿಂದರ್ ಸಿಂಗ್ ಮಾನ್, ದಕ್ಷಿಣ ಏಷಿಯಾ ಅಂತರರಾಷ್ಟ್ರೀಯ ಆಹಾರ ಸಂಶೋಧನಾ ನೀತಿ ಸಂಸ್ಥೆಯ ನಿರ್ದೇಶಕ ಪ್ರಮೋದ್ ಕುಮಾರ್ ಜೋಷಿ, ಕೃಷಿ ಆರ್ಥಿಕ ಪರಿಣಿತ ಅಶೋಕ್ ಗುಲಾಟಿ ಹಾಗೂ ಶೆಟ್ಕಾರಿ ಸಂಘಟನೆಯ ಅಧ್ಯಕ್ಷ ಅನಿಲ್ ಘನವತ್ ಅವರಿದ್ದಾರೆ.

ಸಮಿತಿಗೆ ಸರ್ಕಾರ ದೆಹಲಿಯಲ್ಲಿ ಸ್ಥಳ ಹಾಗೂ ಕಾರ್ಯಕಾರಿ ಸಹಾಯ ಒದಗಿಸಬೇಕು ಹಾಗೂ ದೆಹಲಿ ಮತ್ತಿತರ ಕಡೆಗಳಲ್ಲಿ ಸಭೆ ನಡೆಸುವ ವೆಚ್ಚ ಭರಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಪ್ರತಿಭಟನೆ ನಡೆಸುತ್ತಿರುವ ಇಲ್ಲವೇ ಕಾಯ್ದೆಗಳಿಗೆ ಬೆಂಬಲಿಸುತ್ತಿರುವ ಇಲ್ಲವೇ ವಿರೋಧಿಸುತ್ತಿರುವವರ ಪ್ರತಿನಿಧಿಗಳು ಸಮಿತಿಯ ಮುಂದೆ ತಮ್ಮ ನಿಲುವು ತಿಳಿಸಬಹುದಾಗಿದೆ. ಮೊದಲ ಸಭೆ ನಡೆಸಿದ ಎರಡು ತಿಂಗಳ ಒಳಗೆ ಸಮಿತಿ ತನ್ನ ವರದಿಯನ್ನು ಸಲ್ಲಿಸಬೇಕು. ಇಂದಿಗೆ ಹತ್ತು ದಿನಗಳ ಒಳಗೆ ಮೊದಲ ಸಭೆ ನಡೆಸಬೇಕು ಎಂದು ನ್ಯಾಯಾಲಯ ತಿಳಿಸಿದೆ.

**ದಿನದ ಚುಟುಕು**

ಪಕ್ವತೆಯಲ್ಲಿಹುದು ಬಾಗುವ ಗುಣ
ಅರಿವು ತುಂಬಿದ ಭಾವದ ಋಣ
ನಡೆ- ನುಡಿಯಲ್ಲಿ ಬಿತ್ತಿದ ಬಿಂಬಾ
ಮೊಗದಲ್ಲದರ ಕಾಂತಿಯು ತುಂಬಾ.

- ವೀಕೆಎಂ

# ಸತ್ಯ ಮಾರ್ಗದಲ್ಲಿ ನಡೆಯುವುದೇ ನಿಜವಾದ ಧರ್ಮ

ನ್ಯಾಮತಿ, ಜ.12 - ಭಾರತೀಯ ಸಂಸ್ಕೃತಿಯಲ್ಲಿ ಸತ್ಯ ಮತ್ತು ಧರ್ಮಕ್ಕೆ ಬಹಳಷ್ಟು ಬೆಲೆಯಿದೆ. ಸತ್ಯ ಮಾರ್ಗದಲ್ಲಿ ನಡೆಯುವುದು ಕಷ್ಟವಾದರೂ ಅದನ್ನು ಬಿಡದೇ ನಡೆ ನುಡಿ ಒಂದಾಗಿ ಬಾಳುವುದು ಮುಖ್ಯವೆಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಪೀಠದ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಪಟ್ಟಣದ ಬನಶಂಕರಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಕಳಸಾರೋಹಣ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡುತ್ತಿದ್ದರು.

ಮಾನವ ಜನ್ಮ ಬಹಳ ಅಮೂಲ್ಯವಾದುದು. ಜೀವನ ಸಾರ್ಥಕಗೊಳ್ಳಲು ಚತುರ್ವಿಧ ಪುರುಷಾರ್ಥಗಳು ಎಲ್ಲರಿಗೂ ಬೇಕಾಗಿವೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥ ಪ್ರಾಪ್ತಿಗಾಗಿ ಶ್ರಮಿಸಬೇಕಾಗಿದೆ.

ಸತ್ಯ ಧರ್ಮ ಪರಿಪಾಲನೆಯಿಂದ ಜೀವನದಲ್ಲಿ ಶಾಂತಿ, ಸುಖ ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿಯಲ್ಲಿ ಬೋಧಿಸಿದ್ದಾರೆ.

ವೀರಶೈವ ಧರ್ಮದಲ್ಲಿ ಶಿವಶಕ್ತಿ ಜ್ಞಾನ ಸಮುಚ್ಚಯದಿಂದ ಕೂಡಿದೆ. ಶಿವಶಕ್ತಿಯಿಂದ ಈ ಜಗತ್ತು ನಿರ್ಮಾಣಗೊಂಡಿದೆ. ನ್ಯಾಮತಿ ಬನಶಂಕರಿ ದೇವಸ್ಥಾನ ಶಿಥಿಲವಾಗಿದ್ದನ್ನು ಇಂದು ಸುಂದರವಾಗಿ ನಿರ್ಮಿಸಿ, ಪುನರ್ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ನೆರವೇರಿಸಿರುವುದು ತಮಗೆ ಸಂತೋಷ ತಂದಿದೆ ಎಂದರು.



**ನ್ಯಾಮತಿ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳು**

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಜಿ. ಗಂಗಪ್ಪ, ನ್ಯಾಯವಾದಿ ಕರುಣಾಕರ, ಗುರುಶಾಂತಪ್ಪ, ವಾಗೀಶ್ ನುಚ್ಚಿನ, ಎಸ್.ಡಿ.ಪಂಚಾಕ್ಷರಪ್ಪ ಮಾತನಾಡಿದರು. ಗಂಗಾಧರ ನಿರೂಪಿಸಿದರು. ಪುನರ್ ಪ್ರತಿಷ್ಠಾಪನೆ ಅಂಗವಾಗಿ ಪುಣ್ಯಾಹ ನಾಂದಿ ಪಂಚಕಲಸ ಸ್ಥಾಪನೆ, ಏಕಾದಶ ರುದ್ರ ಕಲಶ, ನವಗ್ರಹ ಮತ್ತು ರುದ್ರಾಭಿಷೇಕ ಗಣಹೋಮ ಪೂಜಾ ಕಾರ್ಯಗಳು ಜರುಗಿದವು. ವೇ.ಕೋಹಳ್ಳಿ ಹಿರೇಮಠದ ವಿಶ್ವಾರಾಧ್ಯ ಶಾಸ್ತ್ರಿಗಳು, ಶಿವಮೊಗ್ಗ ಮಲ್ಲಿಕಾರ್ಜುನ ಸ್ವಾಮಿಗಳು ಮತ್ತು ನ್ಯಾಮತಿ ಜಯಲಿಂಗ ಶಾಸ್ತ್ರಿಗಳು ಪೌರೋಹಿತ್ಯ ವಹಿಸಿದ್ದರು.

## ಜಗಳೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಗಳೂರು ಮತ್ತು ಸೊಕ್ಕೆ ಎಂ.ಯು.ಎಸ್.ಎಸ್ ನಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಇರುವುದರಿಂದ ಇಂದು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಜಗಳೂರು ಟೌನ್ ಫೀಡರ್, ದೇವಿಕೆರೆ, ರಂಗಾಪುರ ರಸ್ತೆ, ಮಾಕುಂಟೆ, ಅರಿಸಿಣ ಗುಂಡಿ, ಜ್ಯೋತಿಪುರ ಫೀಡರ್ ಹಾಗೂ ಸೊಕ್ಕೆ, ಚಿಕ್ಕ ಉಜ್ಜಿನಿ, ಮಾಗಡಿ ಫೀಡರ್ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಎಇಇ ತಿಳಿಸಿದ್ದಾರೆ.

**15ನೇ ವರ್ಷದ ಪುಣ್ಯಸ್ಮರಣೆ**



**ಎಸ್.ಎಸ್. ಮಂಜುನಾಥ್ M.A (ಕಬಡ್ಡಿ ಮಂಜು)**

(ಇನ್ಸ್‌ಪೆಕ್ಟರ್ ಆಫ್ ಸೆಂಟ್ರಲ್ ಎಕ್ಸೈಜ್ & ಕಸ್ಟಮ್ಸ್) ದಾವಣಗೆರೆ. (ನಿಧನ 13.01.2006)

ನೀವು ನಮ್ಮನ್ನಗಲಿ 15 ವರ್ಷಗಳಾದರೂ, ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿದೆ. ನಿಮ್ಮ ಸ್ಮರಣೆಯೇ ನಮಗೆ ದಾರಿ ದೀಪ...

ಶ್ರೀಮತಿ ಶೈಲಜಾ ಮಂಜುನಾಥ್ ಗೋಪನಾಳು, ಮಗ-ನೂತನ್ ಕುಮಾರ್
ಮೋಹನ್‌ರಾಜು ಜಿ.ಎಸ್. ಮತ್ತು ಸಹೋದರ, ಸಹೋದರಿಯರು, ಶ್ಯಾಮೇನಹಳ್ಳಿ ಬಂಧು-ಮಿತ್ರರು, ಗೋಪನಾಳು,
ಟಿ. ದ್ಯಾಮಪ್ಪ ಮತ್ತು ಮಕ್ಕಳು, ಹೂವಿನಹಡಗಲಿ.
ಬಿ.ಇ. ಶಿವಕುಮಾರ್ ನಿವೃತ್ತ E.E., ಮತ್ತು ಸಹೋದರರು, ಮರವಂಜಿ.
ಸೃಷ್ಟಿ ಕಬಡ್ಡಿ ಅಕಾಡೆಮಿ ಸದಸ್ಯರು, ಮಿತ್ರರು ಮತ್ತು ಕ್ರೀಡಾ ಪಟುಗಳು, ದಾವಣಗೆರೆ.

### ಮೊಹಮದ್ ಖುದ್ರತ್‌ವುಲ್ಲಾ ನಿಧನ



ದಾವಣಗೆರೆ ಆಜಾದ್ ನಗರ 1ನೇ ಮೇನ್ 8ನೇ ಕ್ರಾಸ್ (# 614) ವಾಸಿ, ಮೊಹಮದ್ ಖುದ್ರತ್‌ವುಲ್ಲಾ (56) ಅವರು ದಿನಾಂಕ 12.1.2021ರ ಮಂಗಳವಾರ ರಾತ್ರಿ 8 ಗಂಟೆಗೆ ನಿಧನರಾದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.1.2021ರ ಬುಧವಾರ ಮಧ್ಯಾಹ್ನ 3 ಗಂಟೆಗೆ ನಗರದ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇರಲಿದೆ.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ಅರೇಹಳ್ಳಿ ಗ್ರಾಮಸ್ಥರಿಂದ ಉಪೇಂದ್ರಗೆ ಅದ್ದೂರಿ ಸ್ವಾಗತ

ದಾವಣಗೆರೆ, ಜ.12- ರಾಜಕೀಯದ ಮುಂದೆ ಪ್ರಜಾಕೀಯ ವರ್ಕ್ ಆಗಲ್ಲ ಎಂದು ಪ್ರಜಾಕೀಯ ಸ್ಥಾಪನೆ ಮಾಡುವಾಗ ಕೆಲವರು ಹೇಳಿದ್ದರು. ಆದರೆ ಅದನ್ನು ಅರೇಹಳ್ಳಿ ಗ್ರಾಮದ ಮತದಾರರು ಸುಳ್ಳು ಮಾಡಿ, ರಾಜಕೀಯದ ಮುಂದೆ ಪ್ರಜಾಕೀಯವನ್ನು ವರ್ಕ್ ಆಗುವಂತೆ ಮಾಡಿದ್ದಾರೆ ಎಂದು ನಟ, ನಿರ್ದೇಶಕ ಹಾಗೂ ಪ್ರಜಾಕೀಯ ಪಕ್ಷದ ಸಂಸ್ಥಾಪಕ ಉಪೇಂದ್ರ ತಿಳಿಸಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಕಾರಿಗನೂರು ಗ್ರಾಮ ಪಂಚಾಯತಿ 4ನೇ ವಾರ್ಡ್ ಎಸ್‌ಸಿ ಮೀಸಲು ಕ್ಷೇತ್ರದಿಂದ ಪ್ರಜಾಕೀಯ ತತ್ವ ಸಿದ್ಧಾಂತಗಳ ಮೂಲಕ ಜಯ ಗಳಿಸಿದ ಚೇತನ್ ಕುಮಾರ್ ಭೇಟಿಯಾಗಲು ಅರೇಹಳ್ಳಿಗೆ ಉಪೇಂದ್ರ ಆಗಮಿಸಿದ್ದರು. ಅವರನ್ನು ಅಭಿಮಾನಿಗಳು, ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು.



ಈ ವೇಳೆ ಗ್ರಾಮಸ್ಥರನ್ನುದ್ದೇಶಿಸಿ ಉಪೇಂದ್ರ ಮಾತನಾಡಿ, ಅರೇಹಳ್ಳಿ ಗ್ರಾಮದ ಜನತೆ ಪ್ರಜಾಕೀಯ ಅಭ್ಯರ್ಥಿಯನ್ನು ಗೆಲ್ಲಿಸಿ ರಾಜ್ಯಕ್ಕೆ ಮಾದರಿಯಾಗಿದ್ದಾರೆ. ಎಲ್ಲಾ ಹಳ್ಳಿಗಳಿಗೆ ನಿಮ್ಮ ಮಾದರಿಯನ್ನು ಸಾರುವಂತಾಗಬೇಕು. ನೀವು ಗೆಲ್ಲಿಸಿರುವ ಚೇತನ್ ಕುಮಾರ್ ಪ್ರಭುವಲ್ಲ, ಅವರು ನಿಮ್ಮ ಜನ ಸೇವಕ. ಈ ಗೆಲುವು ಪ್ರತಿ ಹಳ್ಳಿಗೂ ಮಾದರಿಯಾಗಬೇಕು ಎಂದ ಅವರು, ಕರ್ನಾಟಕಕ್ಕೆ ನಿಮ್ಮ ಅರೇಹಳ್ಳಿ ಸ್ಫೂರ್ತಿ. ನಾನು ಅರೇಹಳ್ಳಿ ಗ್ರಾಮಸ್ಥರಿಗೆ ಹೃದಯ ತುಂಬಿದ ಅಭಿನಂದನೆಗಳನ್ನು ಸಲ್ಲಿಸುತ್ತೇನೆಂದರು. ಆಗ ಗ್ರಾಮಸ್ಥರು ಉಪೇಂದ್ರ ಅವರಿಗೆ ಬಹುಪರಾಕ್ ಹಾಕಿದರು.

ಹೇಳಿದಂತೆ ಕೆಲಸ ಮಾಡೋರಿಗೆ ಮತ ಹಾಕಬೇಕು. ಇಷ್ಟು ದಿನ ಪಕ್ಷ ನೋಡಿ, ದೊಡ್ಡ ವ್ಯಕ್ತಿ ನೋಡಿ ಮತ ಹಾಕುತ್ತಿದ್ದರು. ಆದರೆ ಈಗ ಅರೇಹಳ್ಳಿ ಗ್ರಾಮಸ್ಥರು ಚೇತನ್ ಕುಮಾರ್ ಅವರ ಸಿದ್ಧಾಂತ ನೋಡಿ ಮತ ಹಾಕಿದ್ದಾರೆ. ಗ್ರಾಮಸ್ಥರ ವಿಶ್ವಾಸವನ್ನು ಚೇತನ್ ಕುಮಾರ್ ಉಳಿಸಿಕೊಂಡು ಹೋಗಬೇಕಾಗಿದೆ ಎಂದರು.

ಪ್ರಜಾಕೀಯ ಸಿದ್ಧಾಂತದ ಮೇಲೆ ಗೆದ್ದಿರುವಂತಹ ಅಭ್ಯರ್ಥಿ ಚೇತನ್ ಕುಮಾರ್ ಅವರು ಆರು ತಿಂಗಳಿಗೆ ಒಮ್ಮೆ ತನ್ನ ಕೆಲಸ ಹೇಗೆ ಮಾಡಿದ್ದೇನೆ ಎಂದು ನಿಮ್ಮನ್ನು ಕೇಳುತ್ತಾರೆ. ಹಾಗೇನಾದರೂ ಎರಡು ಬಾರಿ ಕೆಲಸ ಚೆನ್ನಾಗಿ ಮಾಡಿಲ್ಲ ಎಂದರೆ ರಾಜೀನಾಮೆ ಕೊಡುತ್ತಾರೆ ಎಂದರು.

## ರೈತರ ಕೈ ಹಿಡಿದ ಕೇಂದ್ರ

**(1ನೇ ಪುಟದಿಂದ)** ಅಕ್ಕಿ ಮತ್ತು ಬೇಳೆಯನ್ನು ರಾಜ್ಯದ 4.30 ಕೋಟಿ ಜನರಿಗೆ ಹಂಚಿಕೆ ಮಾಡಲಾಗಿದೆ. ಕೊರೊನಾ ಸಂಕಷ್ಟದಲ್ಲೂ ರೈತರು ಉತ್ತಮ ಬೆಳೆ ತೆಗೆದಿದ್ದರಿಂದ ರಾಜ್ಯದಲ್ಲಿ ಈ ಬಾರಿ ರಾಗಿಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗಿದೆ.

ಮಧ್ಯವರ್ತಿಗಳು ಇದರ ಲಾಭ ಪಡೆಯದಂತೆ ತಡೆಯಲು ಕೇಂದ್ರ ಈ ಕ್ರಮ ಕೈಗೊಂಡಿದೆ ಎಂದರು.

# ಒಳಮೀಸಲಾತಿ ಜಾರಿಯಾಗದಿದ್ದಲ್ಲಿ ಮತದಾರರು ಪ್ರಬುದ್ಧತೆ ತೋರಲಿದ್ದಾರೆ



## ಹರಿಹರದ ಕಾರ್ಯಕ್ರಮದಲ್ಲಿ ರಾಜ್ಯ ಉಚ್ಛ ನ್ಯಾಯಾಲಯದ ನ್ಯಾಯವಾದಿ ಎ. ಹನುಮಂತಪ್ಪ

ಹರಿಹರ, ಜ.12- ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯಂತೆ ಒಳ ಮೀಸಲಾತಿ ಜಾರಿಯಾದರೆ ಮಾದಿಗ ಸಮಾಜ ತಕ್ಷಣವೇ ಅಭಿವೃದ್ಧಿ ಕಾಣುವುದಿಲ್ಲ ಎಂದು ರಾಜ್ಯ ಉಚ್ಛ ನ್ಯಾಯಾಲಯದ ನ್ಯಾಯವಾದಿ ಎ. ಹನುಮಂತಪ್ಪ ಹೇಳಿದರು.

ನಗರದ ಗುರು ಭವನದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿಯಿಂದ ಇಂದು ಹಮ್ಮಿಕೊಳ್ಳಲಾಗಿದ್ದ ಒಳಮೀಸಲಾತಿ ಜಾರಿಗಾಗಿ ಸರ್ಕಾರಕ್ಕೆ ಮನವಿ, ಕಟ್ಟಡ ಕಾರ್ಮಿಕರ ಕಾರ್ಡ್ ವಿತರಣೆ, ಸಮೃದ್ಧಿ ಪಾಸ್ ಬುಕ್ ವಿತರಣೆ, ಗ್ರಾಮ ಪಂಚಾಯ್ತಿ ನೂತನ ಸದಸ್ಯರಿಗೆ ಸನ್ಮಾನ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿ ವಿತರಣಾ ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು.

ಕೆಲ ಜಾತಿಯ ನಾಯಕರಿಗೆ ಒಳ ಮೀಸಲಾತಿ ಜಾರಿಯಾದರೆ ಮಾದಿಗರು ಮೇಲೆ ಬರುತ್ತಾರೆ ಎನ್ನುವ ಹೆದರಿಕೆ ಇದೆ. ಆದರೆ ಇದು ಒಂದೇ ಬಾರಿಗೆ ಆಗುವ ಪ್ರಕ್ರಿಯೆಯಲ್ಲ. ಜಾರಿಯಾದ ತಕ್ಷಣ ನಾವೇನು ಒಮ್ಮೆಲೇ ಎಲ್ಲಾ ಅಧಿಕಾರಗಳನ್ನು ಪಡೆಯುವುದಿಲ್ಲ. ಅವರುಗಳು ಹೆದರುವ ಕಾರಣವಿಲ್ಲ ಎಂದು ಸ್ಪಷ್ಟಪಡಿಸಿದರು.

ನಮ್ಮ ಸಮಾಜದ ಬಾಂಧವರು ಮತದಾನ ಮಾಡುವಲ್ಲಿ ಇತ್ತೀಚೆಗೆ ಪ್ರಬುದ್ಧರಾಗಿದ್ದಾರೆ. ಸರ್ಕಾರ ಆಯೋಗದ ವರದಿಯನ್ನು ಜಾರಿಗೊಳಿಸುವಲ್ಲಿ ವಿಳಂಬ ಮಾಡಿದರೆ, ಮುಂಬರುವ ಚುನಾವಣೆಗಳಲ್ಲಿ ಪ್ರಬುದ್ಧರಾಗುವ ನಮ್ಮ ಸಮಾಜದ ಮತದಾರರು ತಮ್ಮ ಪ್ರಬುದ್ಧತೆಯನ್ನು ತೋರಿಸಲಿದ್ದಾರೆ ಎಂದು ಸೂಚ್ಯವಾಗಿ ಸರ್ಕಾರವನ್ನು ಎಚ್ಚರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ ವಹಿಸಿದ್ದರು. ಶಾಸಕ ಎಸ್.ರಾಮಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪ ಸಭಾಪತಿ ಡಾ.ಎಲ್. ಹನುಮಂತಯ್ಯ, ಮಾಜಿ ಶಾಸಕ ಬಿ.ಪಿ. ಹರೀಶ್ ಆಗಮಿಸಿ, ಮಾದಿಗ ಸಮಾಜದ ಇಂದಿನ ಸ್ಥಿತಿಗತಿಗಳ ಬಗ್ಗೆ ಮತ್ತು ಅವರಿಗೆ ಮೀಸಲಾತಿ ದೊರೆಯಲಿ ಎಂಬ ಆಶಯದೊಂದಿಗೆ ಮಾತನಾಡಿದರು.

ತಾ.ಪಂ. ಅಧ್ಯಕ್ಷರಾದ ಶ್ರೀದೇವಿ ಮಂಜಪ್ಪ, ನಗರಸಭೆ ಸದಸ್ಯರಾದ ಎನ್. ರಜನಿಕಾಂತ್, ಎ.ಕೆ. ಹನುಮಂತಪ್ಪ ಆಟೋ, ಹೋರಾಟ ಸಮಿತಿ ಅಧ್ಯಕ್ಷ ವೈ.ಬಿ. ಪ್ರಭಾಕರ್, ಕಾರ್ಯದರ್ಶಿ ಎಂ.ಎಸ್. ಆನಂದ ಕುಮಾರ್, ಸಂಘಟನಾ ಕಾರ್ಯದರ್ಶಿ ನಿಂಗರಾಜ್, ಉಪಾಧ್ಯಕ್ಷ ಕಂಚಿಕೇರಿ ಕೇಶವ, ಮುಖಂಡರಾದ ಎ.ಕೆ. ಭೂಮೇಶ್, ಎಚ್.ನಿಜಗುಣ, ಎಚ್. ಶಿವಪ್ಪ, ಸದಾಶಿವ, ಬಿ. ಕೃಷ್ಣಪ್ಪ, ಬಿ.ಎನ್. ರಮೇಶ್, ಸುರೇಶ್ ತೆರದಹಳ್ಳಿ, ರಾಕೇಶ್ ಪೂಜಾರ್, ಶ್ರೀನಿವಾಸ್, ಸಾವಿತ್ರಮ್ಮ, ಕೆಂಚಪ್ಪ ಸೇರಿದಂತೆ ಅನೇಕ ಸಮಾಜದ ಮುಖಂಡರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರಾಣೇಬೆನ್ನೂರು ನಗರ ದೇವತೆಯರ ಜಾತ್ರೆ : ಮೆರವಣಿಗೆಗೆ ನೂರು ಜನ ಮಾತ್ರ




ರಾಣೇಬೆನ್ನೂರು, ಜ.12- ಇದೇ ದಿನಾಂಕ ದಿನಾಂಕ 25 ರಿಂದ 30ರವರೆಗೆ ನಡೆಯಲಿರುವ ನಗರ ದೇವತೆಯರಾದ ಗಂಗಾಜಲ ಹಾಗೂ ತುಂಗಾಜಲ ಶ್ರೀ ಚೌಡೇಶ್ವರಿ ದೇವಿಯರ ಜಾತ್ರೆಯ ಮೆರವಣಿಗೆಯಲ್ಲಿ 50 ರಿಂದ 100 ಭಕ್ತರು ಮಾತ್ರ ಭಾಗವಹಿಸಬೇಕು ಎಂದು ಇಂದು ನಡೆದ ಶಾಂತಿ ಸಭೆಯಲ್ಲಿ ಕಟ್ಟಪ್ಪಣೆಯ ತೀರ್ಮಾನ ಕೈಗೊಳ್ಳಲಾಯಿತು.

ಪ್ರತಿ ವರ್ಷದಂತೆ ಮರವಣಿಗೆ ಮಾಡಲು ಒಪ್ಪಿಗೆ ನೀಡಲಾಯಿತಾದರೂ ಡಿಜೆ ಧ್ವನಿವರ್ಧಕ, ವಿವಿಧ ವಾದ್ಯವೃಂದಗಳು, ಅದ್ದೂರಿ ಆಡಂಬರಗಳಿಗೆ ಅವಕಾಶವಿಲ್ಲ. ಆದರೆ ಧಾರ್ಮಿಕ ವಿಧಿವಿಧಾನಗಳಿಗೆ ಯಾವುದೇ ತಡೆ ಇಲ್ಲ. ಜೊತೆಗೆ ಕೇಂದ್ರ ಸರ್ಕಾರದ ಕೋವಿಡ್ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

ಜಾತ್ರೆಯಲ್ಲಿ ಸಾಂಸ್ಕೃತಿಕ ಹಾಗೂ ಮನರಂಜನೆಯ ಯಾವ ಕಾರ್ಯಕ್ರಮಗಳಿಗೆ ಹಾಗೂ ಕಾಯಿ, ಕರ್ಪೂರ, ಬಳೆ, ಬೆಂಡು ಬತ್ತಾಸ ಮುಂತಾದ ಯಾವುದೇ ಅಂಗಡಿಗಳಿಗೆ ಪರವಾನಿಗೆ ಇಲ್ಲ. ಭಕ್ತರು ತಮ್ಮ ಎಂತಹದೇ ಧರ್ಮಾಧಾರಿತ ಹರಕೆಗಳನ್ನು ತೀರಿಸಲು ತಡೆ ಇಲ್ಲ.

ನಗರಸಭೆಯಿಂದ ನಗರದಾದ್ಯಂತ ಸ್ವಚ್ಛತೆ ಹಾಗೂ ದಿನದ 24 ಗಂಟೆ ನೀರು ಸರಬರಾಜು, ಅಗ್ನಿಶಾಮಕ ದಳ, ಗೃಹರಕ್ಷಕ ದಳ ಹಾಗೂ ಪೊಲೀಸರ ಅವಶ್ಯಕ ಸೇವೆ ಲಭ್ಯವಾಗಲಿದೆ. ಒಟ್ಟಾರೆ ಸರಳ ರೀತಿಯಲ್ಲಿ ಜಾತ್ರೆ ನಡೆಸುವ ಸರ್ಕಾರದ ನಿರ್ಧಾರಕ್ಕೆ ಬದ್ಧತೆಯಾಯಿತು.

ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ನಗರಸಭೆ ಸದಸ್ಯರು, ಎರಡು ಜಾತ್ರಾ ಸಮಿತಿಯ ಪದಾಧಿಕಾರಿಗಳು, ತಹಶೀಲ್ದಾರ ಬಸನಗೌಡ ಕೋಟೂರ, ಪೌರಾಯುಕ್ತ ಡಾ. ಮಹಾಂತೇಶ್, ಪೊಲೀಸ್ ವೃತ್ತ ನಿರೀಕ್ಷಕ ವಿ.ಎಂ. ಗೌಡಪ್ಪಗೌಡ ಮತ್ತಿತರರಿದ್ದರು. ಶೇಖಪ್ಪ ಹೊಸಗೌಡ್ರ, ಶಶಿ ಬಸೇನಾಯಕ, ಪ್ರಕಾಶ ಪೂಜಾರ, ಜಯಶ್ರೀ ಪಿಸೆ, ಅನ್ನಪೂರ್ಣ ತಿಳವಳ್ಳಿ, ಮಲ್ಲಪ್ಪ ಅಂಗಡಿ, ಜಮ್ಮಣ್ಣಿ, ಮಣಿ ಪವಾರ್, ಮಲ್ಲಿಕಾರ್ಜುನ ಪೂಜಾರ್ ಮತ್ತಿತರರು ಮಾತನಾಡಿದರು.

# ನಗರದಲ್ಲಿ ಇಂದು ಯೋಗಾಸನ ತರಬೇತಿ

ಆಚಾರ್ಯ ಯೋಗ ವಿದ್ಯಾಶಾಲೆ ವತಿಯಿಂದ ಉಚಿತ ಯೋಗಾಸನ ತರಬೇತಿ ಶಿಬಿರವು ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ ಇದೇ ದಿನಾಂಕ 17 ರವರೆಗೆ ನಡೆಯಲಿದೆ. ಯೋಗ ಶಿಕ್ಷಕ ಗೋ ಪಿನಾಥ್ ಅವರು ಶಿಬಿರವನ್ನು ನಡೆಸಿ ಕೊಡುವರು ಎಂದು ಪುಷ್ಪಾ (9036719573) ತಿಳಿಸಿದ್ದಾರೆ.

# ಮುಂದಿನ 5 ವರ್ಷಗಳಲ್ಲಿ 10 ದಶಲಕ್ಷ ಉದ್ಯೋಗ ಸೃಷ್ಟಿ



ಬೆಂಗಳೂರು, ಜ. 12- ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ರಾಜ್ಯದಲ್ಲಿ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣದ ಜೊತೆಗೆ ಮುಂದಿನ ಐದು ವರ್ಷಗಳಲ್ಲಿ 10 ದಶಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಖಾತೆ ಹೊಂದಿರುವ ಡಾ.ಸಿ.ಎನ್. ಅಶ್ವತ್ಥನಾರಾಯಣ ಇಂದಿಲ್ಲಿ ತಿಳಿಸಿದ್ದಾರೆ.

ಸ್ವಾಮಿ ವಿವೇಕಾನಂದರ 158ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹತ್ತು ದಶಲಕ್ಷ ಉದ್ಯೋಗ ಸೃಷ್ಟಿ ಕುರಿತು ನಡೆದ ಉನ್ನತ ಮಟ್ಟದ ಚರ್ಚಾ ಗೋಷ್ಠಿಯಲ್ಲಿ ಅನೇಕ ಮೌಲಿಕ ಅಭಿಪ್ರಾಯಗಳು ವ್ಯಕ್ತವಾಗಿವೆ, ವಿವಿಧ ಕ್ಷೇತ್ರಗಳ ಸಾಧಕರು ನೀಡಿರುವ ಸಲಹೆಗಳನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಲಿದೆ ಎಂದು ಹೇಳಿದರು.

ಕೌಶಲ್ಯಾಭಿವೃದ್ಧಿ, ಕೃಷಿ, ತೋಟಗಾರಿಕೆ, ಪ್ರವಾಸೋದ್ಯಮ ಸೇರಿದಂತೆ ಉದ್ಯೋಗ ಸೃಷ್ಟಿಯಾಗುವ ಅನೇಕ ಕ್ಷೇತ್ರಗಳನ್ನು ಪ್ರತಿನಿಧಿಸುವ ತಜ್ಞರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಕೃಷಿ, ಕೃಷಿ ಮಾರುಕಟ್ಟೆ, ಉನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಸೇರಿದಂತೆ ಅನೇಕ ಇಲಾಖೆಗಳಲ್ಲಿ ಗಮನಾರ್ಹ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಮಾರುಕಟ್ಟೆಗೆ ತಕ್ಕಂತೆ ತರಬೇತಿ ನೀಡಿ ಕೌಶಲ್ಯಭರಿತ ಮಾನವ ಸಂಪನ್ಮೂಲ ತಯಾರು ಮಾಡುವ ಕೆಲಸ ಯುದ್ಧೋಪಾದಿಯಲ್ಲಿ ನಡೆಯುತ್ತಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ, ಸಮಗ್ರ ಕಲಿಕಾ ನಿರ್ವಹಣಾ ವ್ಯವಸ್ಥೆ, ಡಿಜಿಟಲ್ ಕಲಿಕೆ ಉತ್ತೇಜಿಸಲು ಉನ್ನತ ಶಿಕ್ಷಣ ಪಡೆಯುತ್ತಿರುವ ಸುಮಾರು 1.55 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಗುಣಮಟ್ಟದ ಉಚಿತ ಟ್ಯಾಬ್ಲೆಟ್ ಪಿಸಿ ನೀಡಲು ನಿರ್ಧರಿಸಲಾಗಿದೆ.

ಏಕೀಕೃತ ವಿಶ್ವವಿದ್ಯಾಲಯ ಹಾಗೂ ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್), ಡಿಪ್ಲೋಮಾ ಪಠ್ಯದ ಆಮೂಲಾಗ್ರ ಬದಲಾವಣೆ, ನಾಲ್ಕು ಹಂತಗಳಲ್ಲಿ ಯುವಜನರ ಸಬಲೀಕರಣದ ಜೊತೆಗೆ ಶೇ.34.6ರಷ್ಟಿರುವ ಯುವಜನರ ಕೌಶಲ್ಯಾಭಿವೃದ್ಧಿಗೆ ಕ್ರಮಕೈಗೊಳ್ಳಲಾಗುವುದು.

2025ರ ವೇಳೆಗೆ 15 ಲಕ್ಷ ಯುವಜನತೆ ಸಂಪೂರ್ಣವಾಗಿ ಕೌಶಲ್ಯಭರಿತರಾಗಿ ಹೊರಹೊಮ್ಮಲಿದ್ದಾರೆ ಎಂದು ಡಾ. ಅಶ್ವತ್ಥನಾರಾಯಣ ಹೇಳಿದರು.

ಇದಕ್ಕೂ ಮುನ್ನ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸ್ವಾಮಿ ವಿವೇಕಾನಂದರ ಚಿಂತನೆ ಮತ್ತು ಸಂದೇಶಗಳ ಪ್ರೇರಣೆಯೊಂದಿಗೆ ತಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಶಿಕ್ಷಣವೂ ಸೇರಿದಂತೆ ಎಲ್ಲ ವಿಭಾಗಗಳಲ್ಲೂ ಅವರ ಸ್ಫೂರ್ತಿಯೊಂದಿಗೆ ಕೆಲಸ ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ಹನ್ನೆರಡು ಮಂದಿ ಯುವ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಸ್ವಾವಲಂಬನೆಯ ಸ್ವಾಭಿಮಾನ ರಾಷ್ಟ್ರ ನಿರ್ಮಾಣ ಅಗತ್ಯ

## ದಾವಣಗೆರೆ ವಿವಿಯಲ್ಲಿ ಎಬಿವಿಪಿ ಯಿಂದ ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವ



ದಾವಣಗೆರೆ, ಜ.12- ಸ್ವಾಭಿಮಾನ, ಸ್ವದೇಶಿ ಜಾಗೃತಿ ಮತ್ತು ಸ್ವಾವಲಂಬನೆಯ ಬದುಕನ್ನು ರೂಢಿಸಿಕೊಂಡರೆ ಬೌದ್ಧಿಕವಾಗಿ ಸದೃಢವಾಗಿರುವ ಭಾರತೀಯರು ತಮ್ಮ ಸಾಮರ್ಥ್ಯವನ್ನು ಅರಿತು ಮುನ್ನಡೆದರೆ ಭಾರತವನ್ನು ವಿಶ್ವದ ಮಹಾನ್ ರಾಷ್ಟ್ರವನ್ನಾಗಿ ಪರಿವರ್ತಿಸಲು ಸಾಧ್ಯ ಎಂದು ಆದರ್ಶ ಗೋಖಲೆ ವಿಶ್ವಾಸ ವ್ಯಕ್ತಪಡಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ವತಿಯಿಂದ ವಿಶ್ವವಿದ್ಯಾನಿಲಯದಲ್ಲಿ ಇಂದು ಏರ್ಪಾಡಾಗಿದ್ದ ಸ್ವಾಮಿ ವಿವೇಕಾನಂದರ 158ನೇ ಜಯಂತ್ಯುತ್ಸವದ ಪ್ರಯುಕ್ತ ಏರ್ಪಡಿಸಿದ್ದ ಯುವ ಧ್ವನಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಭಾರತಕ್ಕೆ ಹೊರಗಿನ ಶತ್ರುಗಳಿಗಿಂತ ಒಳಗಿನ ಶತ್ರುಗಳನ್ನು ತಡೆಯುವ, ಅವರ ವಿರುದ್ಧ ಹೋರಾಡುವ ಅನಿವಾರ್ಯತೆ ಇದೆ. ದೇಶದ ಪ್ರತಿಯೊಬ್ಬರೂ ಸ್ವದೇಶಿ ವಸ್ತುಗಳನ್ನೇ ಬಳಸಿ, ಸ್ವಾಭಿಮಾನದಿಂದ ಸ್ವಾವಲಂಬನೆಯ ಬದುಕು ಬಾಳಿದರೆ ಸ್ವಾಮಿ ವಿವೇಕಾನಂದರು ಕಂಡ ಕನಸಿನ ಭಾರತವನ್ನು ನಿರ್ಮಿಸಬಹುದು ಎಂದು ತಿಳಿಸಿದರು.

ದೇಶದಲ್ಲಿರುವ ಪ್ರಸ್ತುತ ಶಿಕ್ಷಣವು ಮಕ್ಕಳಿಗೆ ಪ್ರಮಾಣ ಪತ್ರ ನೀಡುವ ಕಲಿಕೆಯಾಗಿದೆ. ಇದರಿಂದ ಯಾವುದೇ ಪ್ರಯೋಜನವಿಲ್ಲ. ಮಕ್ಕಳಿಗೆ ಅನುಭವ ಆಧಾರಿತ ಬದುಕನ್ನು ಕಟ್ಟಿಕೊಡುವ, ಸಾಮಾಜಿಕ ಜವಾಬ್ದಾರಿ, ನೈತಿಕ ಮೌಲ್ಯಗಳನ್ನು ಕಲಿಸಿ, ಭವಿಷ್ಯವನ್ನು ರೂಪಿಸಿಕೊಳ್ಳುವ ಪ್ರಜ್ಞಾವಂತ, ಸಮಾಜಮುಖಿ ವ್ಯಕ್ತಿಗಳನ್ನು ನಿರ್ಮಿಸಬೇಕು. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಸಮಾಜದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಸ್ವಾಮಿ ವಿವೇಕಾನಂದರ ಸಲಹೆಯಂತೆ ಪ್ರತಿಯೊಬ್ಬ ವ್ಯಕ್ತಿಯ ಗುರಿ ಮತ್ತು ಯೋಚನೆ ಒಂದಾಗಿದ್ದಾಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ. ಆದರೆ ಭಾರತೀಯರಲ್ಲಿ ಯೋಚನೆ ಮತ್ತು ಗುರಿ ಭಿನ್ನವಾಗಿದ್ದರಿಂದ ಶತಮಾನಗಳ ಪರಕೀಯರು ದೇಶವನ್ನು ಆಳುವಂತಾಯಿತು. ಅವರ ದಾಸ್ಯದಿಂದ ದೇಶದ ಸಂಪತ್ತು, ಸಂಪನ್ಮೂಲಗಳು ನಷ್ಟವಾಗಿ ಈಗಲೂ ಅದರ ಪರಿಣಾಮವನ್ನು ಎದುರಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಆದ್ದರಿಂದ ದೇಶೀಯತೆಯ ಭಾವನೆಯೊಂದಿಗೆ ಉನ್ನತ ಯೋಚನೆಗಳೊಂದಿಗೆ ನಿರ್ದಿಷ್ಟ ಗುರಿಯತ್ತ ಚಿಂತನೆ ಮಾಡಿ, ಅನುಷ್ಠಾನಕ್ಕೆ ತರಲು ಎಲ್ಲರೂ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ದಾವಣಗೆರೆ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಮಾತನಾಡಿ, ವೈಯಕ್ತಿಕ ಹಿತಾಸಕ್ತಿ ಬಿಟ್ಟು ಜನಪರ ಕಾಳಜಿಯಿಂದ ಸಮಾಜದ ಹಿತಕ್ಕಾಗಿ ದುಡಿದ ವ್ಯಕ್ತಿ ಸಾಧನೆಯ ಎತ್ತರಕ್ಕೆ ಏರುವನು. ಸಮಾಜ ಗುರುತಿಸಿ ಗೌರವಿಸುವುದು. ಓದು, ಅಧ್ಯಯನದಲ್ಲಿಯೂ ಗುರಿ, ಉದ್ದೇಶಗಳನ್ನು ಒಂದಾಗಿ ಮಾಡಿಕೊಂಡರೆ ಉತ್ತಮ ಸಾಧನೆ ಮಾಡಬಹುದು ಎಂದರು.

ಕುಲಸಚಿವ ಪ್ರೊ. ಬಸವರಾಜ ಬಣಕಾರ, ಪ್ರತಿಯೊಬ್ಬರಲ್ಲಿಯೂ ವಿಶಿಷ್ಟ ವ್ಯಕ್ತಿತ್ವ ಇರುತ್ತದೆ. ತಮ್ಮ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಉತ್ತಮ ಕೆಲಸಗಳಿಗೆ ಬಳಸಿಕೊಂಡಾಗ ಯಶಸ್ಸಿನ ಹಾದಿ ಸುಲಭವಾಗುತ್ತದೆ. ಅದು ವಿವೇಕಾನಂದರ ಆದರ್ಶ ಭಾರತದ ಮರುಸೃಷ್ಟಿಗೆ ನೆರವಾಗುವುದು ಎಂದು ನುಡಿದರು.

ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎಚ್. ಎಸ್. ಅನಿತಾ, ಹಣಕಾಸು ಅಧಿಕಾರಿ ಪ್ರೊ. ಗೋಪಾಲ ಎಂ. ಅಡವಿರಾವ್, ಹಿಂದುಳಿದ ವರ್ಗಗಳ ಸಮಿತಿ ಸಂಯೋಜನಾಧಿಕಾರಿ ಕುಮಾರ ಸಿದ್ದಮಲ್ಲಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ದೇಶದ ಭವ್ಯ ಪರಂಪರೆ, ವೈಜ್ಞಾನಿಕ ಸತ್ಯಗಳು, ಜೀವನ ಶೈಲಿ, ಕೌಟುಂಬಿಕ ಭಾವನಾತ್ಮಕ ಸಂಬಂಧ, ಜೀವನ ಪದ್ಧತಿ, ಮನೆ ಮದ್ದುಗಳ ಬಗ್ಗೆ ಅರಿವು ಮೂಡಿಸಲು ಭಾರತೀಯರಿಗೆ ಸಾಧ್ಯವಾಗದ ಕೆಲಸವನ್ನು ಕೊರೊನಾದಂತ ವೈರಾಣು ಮಾಡಿ ತೋರಿಸಿತು. ಕೋವಿಡ್-19ರ ನಂತರ ಇಡೀ ಜಗತ್ತು ಭಾರತದ ಜೀವನ ಪದ್ಧತಿ, ಆಹಾರ-ವಿಹಾರದ ಮೌಲ್ಯಗಳನ್ನು ಅರಿತು ಅಳವಡಿಸಿಕೊಳ್ಳುವಂತಾಯಿತು. ಈಗಲಾದರೂ ಭಾರತೀಯರು ವಿದೇಶಿ ವ್ಯಾಮೋಹ ಬಿಟ್ಟು, ಭಾರತೀಯತೆಯನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಶಕ್ತ ಭಾರತಕ್ಕೆ ಮತ್ತೊಂದು ಅಡಿಪಾಯ ಹಾಕಿದಂತಾಗುತ್ತದೆ.
>
> -ಆದರ್ಶ ಗೋಖಲೆ

# ಸುಪ್ರೀಂ ಸಮಿತಿಯಲ್ಲಿರುವವರು ಕೃಷಿ ಕಾಯ್ದೆಗಳ ಪರ

## ಪ್ರತಿಭಟನಾ ನಿರತ ರೈತರು, ಕಾಂಗ್ರೆಸ್ ಆರೋಪ

ನವದೆಹಲಿ ಜ. 12 – ಕೃಷಿ ಕಾಯ್ದೆಗಳ ಬಿಕ್ಕಟ್ಟು ನಿವಾರಣೆಗೆ ಸುಪ್ರೀಂ ಕೋರ್ಟ್ ರಚಿಸಿರುವ ಸಮಿತಿಯಲ್ಲಿರುವ ನಾಲ್ವರು ಸದಸ್ಯರು ಸುಧಾರಣೆಗಳ ಪರವಾಗಿದ್ದಾರೆ ಎಂದು ಪ್ರತಿಭಟನಾ ನಿರತ ರೈತರು ಹಾಗೂ ಕಾಂಗ್ರೆಸ್ ಪಕ್ಷ ದೂರಿವೆ.

ಭೂಪಿಂದರ್ ಸಿಂಗ್ ಮಾನ್, ಅನಿಲ್ ಘನವತ್, ಪ್ರಮೋದ್ ಕುಮಾರ ಜೋಷಿ ಹಾಗೂ ಅಶೋಕ್ ಗುಲಾಟಿ ಅವರು ಈ ಹಿಂದೆ ಕೃಷಿ ಕಾಯ್ದೆಗಳನ್ನು ಬೆಂಬಲಿಸಿದ್ದಾರೆ. ಕೆಲವರು ಸುಪ್ರೀಂ ಕೋರ್ಟ್ ದಾರಿ ತಪ್ಪಿಸಿದ್ದಾರೆ ಎಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ವಕ್ತಾರ ರಣದೀಪ್ ಸುರ್ಜೇವಾಲಾ, ಸಮಿತಿಯಲ್ಲಿರುವ ಸದಸ್ಯರು ಈ ಹಿಂದೆ ನೂತನ ಕಾಯ್ದೆಗಳ ಪರವಾಗಿ ನಿಲುವು ವ್ಯಕ್ತಪಡಿಸಿದ್ದಾರೆ. ಇವರ ಕೈಯಲ್ಲಿ ರೈತರ ಹಿತ ರಕ್ಷಣೆ ಸಾಧ್ಯವಿಲ್ಲ ಎಂದಿದ್ದಾರೆ. ಆದರೆ, ಕೆಲ ಕೃಷಿ ಆರ್ಥಿಕತೆಯ ಪರಿಣಿತರು ಕೃಷಿ ಕಾಯ್ದೆಗಳ ಜಾರಿ ತಡೆಯುವ ಹಾಗೂ ಸಮಿತಿ ರಚಿಸುವ ಸುಪ್ರೀಂ ಕೋರ್ಟ್ ನಿರ್ಧಾರಗಳನ್ನು ಸ್ವಾಗತಿಸಿದ್ದಾರೆ.

ಪ್ರತಿಭಟನೆಯಲ್ಲಿ ತೊಡಗಿರುವ ರೈತರೆಂದೂ ಸಮಿತಿ ರಚನೆಗೆ ಕೇಳಿರಲಿಲ್ಲ. ಸುಪ್ರೀಂ ಕೋರ್ಟ್ ಸಮಿತಿ ರಚಿಸುವ ಕ್ರಮದ ಹಿಂದೆ ಸರ್ಕಾರದ ಪಾತ್ರವಿದೆ ಎಂದು ಪ್ರತಿಭಟನಾ ರೈತ ಮುಖಂಡ ಬಲಬೀರ್ ಸಿಂಗ್ ರಾಜೆವಾಲ್ ಆರೋಪಿಸಿದ್ದಾರೆ.

ನೂತನ ಕೃಷಿ ಕಾಯ್ದೆಗಳ ಜಾರಿಗೆ ಸಮಯ ಬೇಕಾಗಿದೆ. ಇವುಗಳನ್ನು ಅವಸರದಲ್ಲಿ ಜಾರಿಗೆ ತರಲಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ ಎಂದು ಮಾಜಿ ಕೇಂದ್ರ ಸಚಿವ ಹಾಗೂ ಆರ್ಥಿಕ ಪರಿಣಿತ ವೈ.ಕೆ. ಅಲಘ್ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ನಿರ್ಧಾರ ಒಳ್ಳೆಯದಿದೆ ಎಂದು ಇನ್ನೋರ್ವ ಆರ್ಥಿಕ ಪರಿಣಿತ ಹಾಗೂ ಯೋಜನಾ ಆಯೋಗದ ಮಾಜಿ ಸದಸ್ಯ ಅಭಿಜಿತ್ ಸೇನ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ರಚಿಸಿರುವ ಸಮಿತಿ ನ್ಯಾಯಿಕ ಪ್ರಕ್ರಿಯೆಯ ಭಾಗವಾಗಿದೆ. ರೈತ ಸಂಘಟನೆಗಳು ಇದನ್ನು ನಿರಾಕರಿಸುವಂತಿಲ್ಲ ಎಂದು ಕೆ.ಎಸ್. ಲೀಗಲ್ ಅಂಡ್ ಅಸೋಸಿಯೇಟ್ಸ್‌ನ ಸೋನಂ ಚಂದ್ವಾನಿ ಅಭಿಪ್ರಾಯ ಪಟ್ಟಿದ್ದಾರೆ.

# ಕೊಟ್ಟೂರು ನಗರ ಬಿಜೆಪಿ ಅಧ್ಯಕ್ಷರಾಗಿ ವಿಕ್ರಮ್



ಕೊಟ್ಟೂರು, ಜ.12- ಕೊಟ್ಟೂರು ನಗರ ಘಟಕದ ಬಿಜೆಪಿ ಅಧ್ಯಕ್ಷರಾಗಿ ಭರಮನಗೌಡ್ರು ರಾಮನಗೌಡ್ರು ವಿಕ್ರಮ್ ಅವರು ಆಯ್ಕೆಯಾಗಿದ್ದಾರೆ.

ಸೋಮವಾರ ಸಂಜೆ ಕೊಟ್ಟೂರು ಪ್ರವಾಸಿ ಮಂದಿರದಲ್ಲಿ ನಡೆದ ಪಕ್ಷದ ಮುಖಂಡರ ಹಾಗೂ ಕಾರ್ಯಕರ್ತರ ಸಭೆಯಲ್ಲಿ ಬಿ.ಆರ್.ವಿಕ್ರಮ್ ಅವರ ಆಯ್ಕೆಯನ್ನು ಮಂಡಲ ಅಧ್ಯಕ್ಷ ವಿಜಯಕುಮಾರ್ ಸ್ವಾಮಿ ಅವರು ಘೋಷಿಸಿದರು.

ಸದಸ್ಯ ಕೊಟ್ಟೂರು ಕಾಟನ್ ಜೆಸಿಐ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಬಿ.ಆರ್. ವಿಕ್ರಮ್ ಅವರು, ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಪಕ್ಷದ ಹಿರಿಯ ಮುಖಂಡರಾದ ಎಂ.ಎಂ.ಜೆ.ಸ್ವರೂಪಾನಂದ, ಪ.ಪಂ.ಸದಸ್ಯರಾದ ಬೋರ್‌ವೆಲ್ ತಿಪ್ಪೇಸ್ವಾಮಿ, ಗಂಗನಳ್ಳಿ ಸಿದ್ದಯ್ಯ, ಹೊಸಮನಿ ಮಲ್ಲಿಕಾರ್ಜುನ, ಭರಮಗೌಡ ಪಾಟೀಲ್, ಮರಬದ ನಾಗರಾಜ್, ಉಮಾಪತಿ, ಕೊಟ್ರೇಶ್ ಕಾಮಶೆಟ್ಟಿ, ಅಡಿಕಿ ಮಂಜುನಾಥ್, ರಾಘವೇಂದ್ರ ಮತ್ತಿತರರಿದ್ದರು.

# ಪುಸ್ತಕಗಳ ಕೊಡುಗೆ

ದಾವಣಗೆರೆ, ಜ.12- ನಿಟುವಳ್ಳಿಯ ಶ್ರೀ ಆಂಜನೇಯ ಸನ್ನಿಧಿಯಲ್ಲಿ ನಡೆದ ಕಾರ್ತಿಕೋತ್ಸವ ಸಮಾರಂಭದಲ್ಲಿ ಬೆಸ್ಕಾಂ ಸಹಾಯಕ ಇಂಜಿನಿಯರ್ ಓ. ತಿಪ್ಪೇಸ್ವಾಮಿ ಅವರು ಬಡ ಹಾಗೂ ಕಾರ್ಮಿಕರ ಮಕ್ಕಳಿಗೆ ಪುಸ್ತಕ ಹಾಗೂ ಲೇಖನಿಗಳನ್ನು ವಿತರಿಸಿದರು.

ತಿಪ್ಪೇಸ್ವಾಮಿ ಅವರಿಗೆ ಮಕ್ಕಳ ಲೋಕದ ಸಂಸ್ಥಾಪಕ ಅಧ್ಯಕ್ಷ ಕೆ.ಎನ್. ಸ್ವಾಮಿ, ಪ್ರಾಚಾರ್ಯ ಎನ್. ಪುಟ್ಟಾನಾಯ್ಕ, ಕರ್ನಾಟಕ ಜನಪದ ಅಕಾಡೆಮಿ ಸದಸ್ಯರಾದ ಶ್ರೀಮತಿ ಸಿ.ಕೆ. ರುದ್ರಾಕ್ಷಿ ಬಾಯಿ ಅಭಿನಂದಿಸಿದ್ದಾರೆ. ಕಾರ್ತಿಕೋತ್ಸವ ಸಾನ್ನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರ ಸ್ವಾಮೀಜಿ ವಹಿಸಿದ್ದರು.

# ಅಕ್ರಮ ಮದ್ಯ ಮಾರಾಟ : ಕಾನೂನು ಕ್ರಮ ಕೈಗೊಳ್ಳಲು ರಾಜ್ಯ ಮಹಿಳಾ ಒಕ್ಕೂಟದ ಒತ್ತಾಯ

## ಹರಪನಹಳ್ಳಿ



ಹರಪನಹಳ್ಳಿ, ಜ.12- ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದರಿಂದ ಬಡತನದಲ್ಲಿ ಬದುಕುತ್ತಿರುವ ಎಷ್ಟೋ ಕುಟುಂಬಗಳು ಬೀದಿಗೆ ಬಂದು ತಮ್ಮ ಅಳಲನ್ನು ತೋಡಿಕೊಂಡು ಜೀವನ ಮಾಡುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮಹಿಳಾ ಒಕ್ಕೂಟದ ಪದಾಧಿಕಾರಿಗಳು ಒತ್ತಾಯಿಸಿ ಪಟ್ಟಣದ ಅಬಕಾರಿ ಇಲಾಖೆ ಕಛೇರಿಗೆ ತೆರಳಿದ ಮಹಿಳೆಯರು ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯ ಮಹಿಳಾ ಘಟಕದ ತೊಗರಿಕಟ್ಟಿ ಭಾಗ್ಯಮ್ಮ ಹಾಗೂ ಶೃತಿ ಮಾತನಾಡಿ, ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ 150 ರೂ. ಕೂಲಿ ಕೆಲಸದಿಂದ ಜೀವನ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು, ಒಂದೊತ್ತಿನ ಊಟಕ್ಕೂ ಪರದಾಡುತ್ತಿರುವ ಕೆಲ ಕುಟುಂಬಗಳು ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ 100 ರೂ. ಕೊಟ್ಟು ಮದ್ಯ ಸೇವಿಸಿದರೆ ಕುಟುಂಬದ ಜೀವನ ಯಾವ ರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಅಧಿಕಾರಿಗಳು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳನ್ನು ಆಗ್ರಹಿಸಿದರು.


## ಬೇಕಾಗಿದ್ದಾರೆ / WANTED

MS EXCEL/ WORD, EXCELನ ಫಾರ್ಮುಲಾಗಳಲ್ಲಿ ಪರಿಣಿತರು, ಡಾಟಾ ಎಂಟ್ರಿ ಆಪರೇಟರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಭತ್ಯೆ, ESI ಹಾಗೂ PF ಸೌಲಭ್ಯಗಳಿವೆ.

Required experienced candidate with Knowledge in MS EXCEL formulas and reporting. Attractive Salary, ESI and PF will be provided. Intrested candidate please contact.

ಸ್ಥಳ: ಎ.ಕೆ. ಫಾರ್ಮ

ತರಳಬಾಳು ಶಾಲೆ ಎದರು, ಹದಡಿ ರಸ್ತೆ, ದಾವಣಗೆರೆ.



## SCIENCE ACADEMY (R.)

(A UNIQUE CENTRE FOR P.U. CLASSES)

# 307/2B, 1st FLOOR, 2ND MAIN, P.J. EXTN, NEAR STADIUM, DAVANGERE – 4

ADMISSION STARTED FOR

II PUC SCIENCE PCMB TUTIONS

Classes starts from 20th January 2021

For more Details contact: Office: 08192 – 257546, Mobile: 9980368779, 9448178087.

"We don't have any other branches in Davangere in the name of Academy"


## ಗ್ರಾಮ ಪಂಚಾಯಿತಿ ಕಾರ್ಯಾಲಯ ಕಾಡಜ್ಜಿ

ದಾವಣಗೆರೆ ತಾಲ್ಲೂಕು ದಾವಣಗೆರೆ ಜಿಲ್ಲೆ

ಕಾಗ್ರಾ.ಪಂ.ಸಂ/01/2020-21 ದಿನಾಂಕ : 12/01/2021

### ಟೆಂಡರ್ ಪ್ರಕಟಣೆ

2020-21ನೇ ಸಾಲಿನ ದಾವಣಗೆರೆ ತಾಲ್ಲೂಕಿನ ಕಾಡಜ್ಜಿ ಗ್ರಾಮ ಪಂಚಾಯಿತಿ 15 ನೇ ಹಣಕಾಸು ಯೋಜನೆಯಡಿ ಕಾಡಜ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಗ್ರಾಮಗಳಿಗೆ ಕುಡಿಯುವ ನೀರು ನಿರ್ವಹಣೆಗೆ ಸಾಮಗ್ರಿಗಳು ಹಾಗೂ ಬೀದಿ ದೀಪ ನಿರ್ವಹಣೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್ ಕರೆಯಲಾಗಿದೆ.

| ಕ್ರ.ಸಂ | ಕಾಮಗಾರಿ | ಅಂದಾಜು ಮೊತ್ತ |
|---|---|---|
| 1 | ಕಾಡಜ್ಜಿ, ನಾಗರಕಟ್ಟೆ ಮತ್ತು ಪುಟಗನಾಳು ಗ್ರಾಮಗಳ ಕುಡಿಯುವ ನೀರು ನಿರ್ವಹಣೆ ಸಾಮಗ್ರಿ ಖರೀದಿಗೆ ಕಾಯ್ದಿರಿಸಿದ ಮೊತ್ತ. | 4,74,000-00 |
| 2 | ಕಾಡಜ್ಜಿ, ನಾಗರಕಟ್ಟೆ ಮತ್ತು ಪುಟಗನಾಳು ಗ್ರಾಮಗಳ ಬೀದಿ ದೀಪ ನಿರ್ವಹಣೆ ಸಾಮಗ್ರಿ ಖರೀದಿಗಾಗಿ ಕಾಯ್ದಿರಿಸಿದ ಮೊತ್ತ. | 3,20,000-00 |

- ♦ ಖಾಲಿ ಕೊಟೇಶನ್ ವಿತರಿಸುವ ಕೊನೆಯ ದಿನಾಂಕ : 16/01/2021
- ♦ ಭರ್ತಿ ಮಾಡಿದ ಕೊಟೇಶನ್ ಸಲ್ಲಿಸುವ ದಿನಾಂಕ : 22/01/2021
- ♦ ಭರ್ತಿ ಮಾಡಿದ ಕೊಟೇಶನ್ ತೆರೆಯುವ ದಿನಾಂಕ : 25/01/2021

♦ ಷರತ್ತುಗಳು

1. ಸರಬರಾಜು ಮಾಡಿ ಅಳವಡಿಸುವ ಸಾಮಗ್ರಿಗಳು ಐ.ಎಸ್.ಐ. ಮುದ್ರಿತ ಸಾಮಗ್ರಿಗಳಾಗತಕ್ಕದ್ದು ಮತ್ತು ತಾಂತ್ರಿಕ ನಿಶ್ಚಿತ ಗುಣ ಮಟ್ಟದ ಸಾಮಗ್ರಿಗಳಾಗಿರತಕ್ಕದ್ದು.
2. ಟೆಂಡರ್‌ನಲ್ಲಿ ಭಾಗವಹಿಸುವ ಸಂಸ್ಥೆ/ಸರಬರಾಜುದಾರರು ಸಂಸ್ಥೆ ನೋಂದಣಿ ಪ್ರಮಾಣ ಪತ್ರ ಕಳೆದ ಸಾಲಿನ ಆದಾಯ ತೆರಿಗೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. ಎಲ್ಲಾ ತೆರಿಗೆಗಳನ್ನು ಸೇರಿ ದರ ನಮೂದಿಸುವುದು.
4. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ರದ್ದು ಪಡಿಸುವ ಅಧಿಕಾರ ಕಾಯ್ದಿರಿಸಲಾಗಿದೆ.
5. ಟೆಂಡರ್ ಅನುಮೋದನೆಯಾಗಿ 7 ದಿನಗಳೊಳಗಾಗಿ ಟೆಂಡರ್‌ದಾರರು ಟೆಂಡರ್ ಕರಾರು ಒಪ್ಪಂದ ಮಾಡಿಕೊಳ್ಳತಕ್ಕದ್ದು.

ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ, ಕಾಡಜ್ಜಿ.

ಸಹಿ/- ಆಡಳಿತಾಧಿಕಾರಿಗಳು, ಗ್ರಾಮ ಪಂಚಾಯಿತಿ, ಕಾಡಜ್ಜಿ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಸ್ಥಿರ ಸೊತ್ತು ಜಮೀನನ್ನು ಇದರ ಮಾಲೀಕರಾದ **ಶ್ರೀ ಬಿ.ಪಿ. ಚಂದ್ರಪ್ಪ ಬಿನ್ ಲೇಟ್ ಬೇವಿನಹಳ್ಳಿ ಪರುಶಪ್ಪ, ಹಾಗೂ ಶ್ರೀ ಬಿ.ಪಿ. ಕೆಂಚಪ್ಪ ಬಿನ್ ಲೇಟ್ ಬೇವಿನಹಳ್ಳಿ ಪರುಶಪ್ಪ, ಗುಡ್ಡದ ಕ್ಯಾಂಪ್, ಹಳೇಬಾತಿ ಗ್ರಾಮ** ಇವರು ನನ್ನ ಕಕ್ಷಿಗಾರರಾದ **ಶ್ರೀ ಎನ್. ಮಂಜುನಾಥ ಬಿನ್ ಶ್ರೀ ಶೈಲಪ್ಪ ನಾಲವಾಡ 'ಬಿ' ಬ್ಲಾಕ್ ಎಸ್.ಎಸ್. ಬಡಾವಣೆ, ದಾವಣಗೆರೆ** ಇವರಿಗೆ ಕ್ರಯಕ್ಕೆ ಕೊಡಲೊಪ್ಪಿ ದಿನಾಂಕ 27-06-2019 ರಂದು ಒಂದು ಕ್ರಯದ ಕರಾರು ಬರೆದುಕೊಟ್ಟು ಮುಂಗಡ ಹಣ ಪಡೆದುಕೊಂಡಿರುತ್ತಾರೆ. ಹೀಗಾಗಿ ಸದ್ರಿ ಶ್ರೀ ಬಿ.ಪಿ. ಚಂದ್ರಪ್ಪ ಬಿನ್ ಲೇಟ್ ಬೇವಿನಹಳ್ಳಿ ಪರುಶಪ್ಪ ಹಾಗೂ ಶ್ರೀ ಬಿ.ಪಿ. ಕೆಂಚಪ್ಪ ಬಿನ್ ಲೇಟ್ ಬೇವಿನಹಳ್ಳಿ ಪರುಶಪ್ಪ ಇವರು ಇತರೆಯವರಿಗೆ ಷೆಡ್ಯೂಲ್ ಸೊತ್ತನ್ನು ಬೇರೆ ಯಾರಿಗೂ ಯಾವ ರೀತಿಯಿಂದಲೂ ಮಾರಾಟ, ಪರಭಾರೆ, ಕ್ರಯ, ಇತ್ಯಾದಿ ಮಾಡುವ ಹಕ್ಕು ಇರುವುದಿಲ್ಲ. ಸದ್ರಿ ಶ್ರೀ ಬಿ.ಪಿ. ಚಂದ್ರಪ್ಪ ಬಿನ್ ಲೇಟ್ ಬೇವಿನಹಳ್ಳಿ ಪರುಶಪ್ಪ ಹಾಗೂ ಶ್ರೀ ಬಿ.ಪಿ, ಕೆಂಚಪ್ಪ ಬಿನ್. ಲೇಟ್ ಬೇವಿನಹಳ್ಳಿ ಪರುಶಪ್ಪ ಇವರುಗಳು ಈಗ ನನ್ನ ಕಕ್ಷಿಗಾರರಿಗೆ ತೊಂದರೆ ಹಾಗೂ ಅನಾನುಕೂಲ ಮಾಡುವ ಉದ್ದೇಶದಿಂದ ಅವರಿಗೆ ಈಗಾಗಲೇ ಬರೆದುಕೊಟ್ಟಿರುವ ಕ್ರಯದ ಕರಾರಿನ ವ್ಯವಹಾರವನ್ನು ಮುಚ್ಚಿಟ್ಟು, ಬೇರೆಯವರಿಗೆ ಷೆಡ್ಯೂಲ್ ಸೊತ್ತನ್ನು ಮಾರಾಟ ಮಾಡುವ ಹುನ್ನಾರ ಹಾಗೂ ತರದೂದಿನಲ್ಲಿದ್ದಾರೆಂದು ತಿಳಿದು ಬಂದಿದೆ. ಕಾರಣ ಈ ಸಾರ್ವಜನಿಕ ಪ್ರಕಟಣೆ ನೀಡಲಾಗಿದೆ.

ಸಾರ್ವಜನಿಕರು ಯಾರೂ ಈ ಷೆಡ್ಯೂಲ್ ಸೊತ್ತಿನ ಬಗ್ಗೆ ಸದರಿ ಶ್ರೀ ಬಿ.ಪಿ. ಚಂದ್ರಪ್ಪ ಬಿನ್. ಲೇಟ್ ಬೇವಿನಹಳ್ಳಿ ಪರುಶಪ್ಪ ಹಾಗೂ ಶ್ರೀ ಬಿ.ಪಿ ಕೆಂಚಪ್ಪ ಬಿನ್ ಲೇಟ್ ಬೇವಿನಹಳ್ಳಿ ಪರುಶಪ್ಪ ಇವರೊಂದಿಗೆ ಯಾವುದೇ ರೀತಿಯ ಕ್ರಯ ಅಥವಾ ಬೇರೆ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ. ಹಾಗೊಂದು ವೇಳೆ ಯಾರಾದರೂ ಈ ಬಗ್ಗೆ ಯಾವುದೇ ರೀತಿಯ ವ್ಯವಹಾರ, ವಗೈರೆ ಅಥವಾ ದಾಖಲೆಗಳನ್ನು ಸೃಷ್ಟಿಸಿದಲ್ಲಿ ಅವು ಯಾವುವೂ ನನ್ನ ಕಕ್ಷಿದಾರರನ್ನು ಪ್ರತಿಬಂಧಿಸುವುದಿಲ್ಲ ಹಾಗೂ ಈ ಬಗ್ಗೆ ಅವರು ಸೂಕ್ತ ಕಾನೂನು ಕ್ರಮ ಕೈಗೊಳ್ಳುವವರಿದ್ದಾರೆ.

**ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಅಗಸನಕಟ್ಟೆ ಗ್ರಾಮದ ರೀ ಸರ್ವೆ ನಂ.23/1 ವಿಸ್ತೀರ್ಣ, ಎಕರೆ 05 ಗುಂಟೆ 13 ಆಕಾರ 9.69 ಪೈಸೆವುಳ್ಳ ತರಿ ಜಮೀನಿಗೆ ಚಕ್ಕುಬಂದಿ: ಪೂರ್ವ- ಗಡಿ ರಸ್ತೆ, ಪಶ್ಚಿಮ-ಅಗಸನಕಟ್ಟೆ ಕೆರೆ, ಉತ್ತರ-ಸರ್ವೇ ನಂ.22 ರ ಜಮೀನು, ದಕ್ಷಿಣ - ಚಿಲಕೂರಿ ಸತ್ಯನಾರಾಯಣ ಹಾಗೂ ಇತರೆಯವರ ಜಮೀನು.**

ದಾವಣಗೆರೆ
ದಿನಾಂಕ: 10-01-2021

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್‌ಎಲ್.ಎಂ.
ವಕೀಲರು, ನಂ.5 & 6, 1ನೇ ಅಂತಸ್ತು,
ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್,
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು,
ಪಿ.ಬಿ. ರಸ್ತೆ, ದಾವಣಗೆರೆ-577006.

## ಯುವ ಜನರು ಜ್ಞಾನದ ಬೆನ್ನು ಹತ್ತಬೇಕು



ಡಿಸಿ ಮಹಾಂತೇಶ್ ಕರೆ

ದಾವಣಗೆರೆ, ಜ.12- ನಗರದ ವಿನ್ನರ್ಸ್ ಸಮೂಹ ಸಂಸ್ಥೆ ವತಿಯಿಂದ ನೂತನವಾಗಿ ಆರಂಭಿಸಿರುವ ವಿನ್ನರ್ಸ್ ಡಿಜಿಟಲ್ ಲೈಬ್ರರಿಯನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಉದ್ಘಾಟಿಸಿದರು. ಉನ್ನತ ಸಾಧನೆಗಳಿಗೆ ಯಾವುದೇ ಶಾರ್ಟ್ ಕಟ್ ದಾರಿಗಳು ಇರುವುದಿಲ್ಲ. ಜ್ಞಾನದಿಂದ ಆತ್ಮವಿಶ್ವಾಸ ವೃದ್ಧಿಸುತ್ತದೆ. ಯುವ ಜನರು ಜ್ಞಾನದ ಬೆನ್ನು ಹತ್ತಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎನ್.ಟಿ. ಮಂಜುನಾಥ್, ಅಭಿಯಂತರ ಹೆಚ್.ವಿ. ಮಂಜುನಾಥ್, ಪಾಲಿಕೆ ಸದಸ್ಯ ಪ್ರಸನ್ನಕುಮಾರ್ ಮಾತನಾಡಿದರು. ಶಿಕ್ಷಣ ತಜ್ಞ ಡಾ. ಹೆಚ್.ವಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕೆಎಎಸ್ ಸಾಧಕರಿಗೆ ಸನ್ಮಾನಿಸಲಾಯಿತು. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಕೆ.ಆರ್. ಚಂದ್ರಶೇಖರಪ್ಪ ಉಪಸ್ಥಿತರಿದ್ದರು.

ಸಂಸ್ಥೆಯ ಸಂಸ್ಥಾಪಕ ಡಾ. ಶಿವರಾಜ್ ಕಬ್ಬೂರ್ ಪ್ರಾಸ್ತಾವಿಕ ನುಡಿಗಳನ್ನಾಡಿ, ಸ್ವಾಗತಿಸಿದರು. ಉಪನ್ಯಾಸಕರಾದ ಜೆ.ಪಿ. ಪ್ರದೀಪ್ ಕುಮಾರ್ ವಂದಿಸಿದರು. ಎನ್.ಟಿ. ಮರುಳಸಿದ್ದಪ್ಪ ನಿರೂಪಿಸಿದರು.

## ವಾರದೊಳಗಾಗಿ ಶಾಲಾವಾರು ಇರುವ ಕೊರತೆಯ ಅಂಶಗಳನ್ನು ಸರಿಪಡಿಸಿಕೊಳ್ಳದಿದ್ದರೆ ಸೂಕ್ತ ಕ್ರಮ

ಹರಪನಹಳ್ಳಿ ಬಿಇಒ ಎಸ್.ಎಂ.ವೀರಭದ್ರಯ್ಯ ಎಚ್ಚರಿಕೆ



ಹರಪನಹಳ್ಳಿ, ಜ.12- ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಹರಪನಹಳ್ಳಿ ಉತ್ತರ ಮತ್ತು ದಕ್ಷಿಣ ಕ್ಲಸ್ಟರ್‌ಗಳ ವ್ಯಾಪ್ತಿಗೆ ಒಳಪಡುವ 54 ಶಾಲೆಗಳಿಗೆ ಮಿಂಚಿನ ಸಂಚಾರ ವಿದ್ಯಾಗಮ ಪ್ರಗತಿ ಅನಾವರಣ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಪಟ್ಟಣದ ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ಪ್ರಾರಂಭವಾದ ಈ ಕಾರ್ಯಕ್ರಮ 17 ತಂಡಗಳನ್ನು ರಚಿಸಿಕೊಂಡು ಶಾಲೆಗಳಿಗೆ ಸಂದರ್ಶನ ನೀಡಿ ಶಾಲೆಯಲ್ಲಿ ಕೋವಿಡ್-19ಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮಗಳು, ವಿದ್ಯಾಗಮ ಕಾರ್ಯಕ್ರಮ ಪ್ರಾರಂಭವಾದಾಗಿನಿಂದ ಶಾಲೆಗೆ ಹಾಜರಾಗುತ್ತಿರುವ ಮಕ್ಕಳು, ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಶಾಲೆಯಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹಾಗೂ ಮಕ್ಕಳ ಕಲಿಕೆಗೆ ರೂಪಿಸಿದ ಯೋಜನೆಗಳಿಗೆ ಅನುಗುಣವಾಗಿ ಅನುಷ್ಠಾನದ ಬಗ್ಗೆ ದಾಖಲೆಗಳ ಸಮೇತ ಸಂದರ್ಶಕರು ಪರಿಶೀಲನೆ ಮಾಡಿದರು.

ಮಧ್ಯಾಹ್ನದ ಅವಧಿಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೇಗಳಪೇಟೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರೊಂದಿಗೆ ಸಂದರ್ಶಕರು ಹಾಜರಾದರು. ತದನಂತರ ಸಂದರ್ಶನ ಅವಧಿಯಲ್ಲಿ ಕಂಡುಬಂದ ಲೋಪದೋಷಗಳನ್ನು ಮತ್ತು ಶಾಲೆಯಲ್ಲಿನ ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಲಾಯಿತು. ಶಾಲೆಯಲ್ಲಿ ಕಂಡುಬಂದ ಅಂಶಗಳನ್ನು ಮತ್ತು ಬೇಕಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ ಅವರು ನಗರದ ಶಾಲೆಗಳ ಮುಖ್ಯ ಶಿಕ್ಷಕರುಗಳನ್ನು ಉದ್ದೇಶಿಸಿ ಇನ್ನೊಂದು ವಾರದೊಳಗಾಗಿ ಶಾಲಾವಾರು ತಮ್ಮ ಕೊರತೆಯ ಅಂಶಗಳನ್ನು ಸರಿಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಕ್ರಮ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು.

ಕ್ಷೇತ್ರ ಸಮನ್ವಯ ಅಧಿಕಾರಿ ಡಿ. ಮಲ್ಲಿಕಾರ್ಜುನ್, ಅಕ್ಷರ ದಾಸೋಹ ಕಾರ್ಯಕ್ರಮದ ಸಹಾಯಕ ನಿರ್ದೇಶಕ ಜಯರಾಜ್, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಮುಸ್ತಫಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಯುವಕರ ದಿನಾಚರಣೆ

ಯುವಕರೆ ಯುವಕರೆ ಜಾಗೃತರಾಗಿ
ಯಾವತ್ತೂ ನೀವು ಸೋಲನೊಪ್ಪದಿರಿ
ಭಾವ ಶುದ್ಧರಾಗಿ ಎತ್ತರಕೆ ಏರಿ
ನವ ಉತ್ಸಾಹದಿ ಬಾನಲ್ಲಿ ಹಾರಿ

ಒಳಗಿರುವ ಅಂತಃಶಕ್ತಿಯ ಬಳಸಿ
ಹೊಳೆವ ಕ್ರಿಯಾತ್ಮಕತೆಯನ್ನು ಬೆಳೆಸಿ
ಎಳೆಯ ಹೂವಂದದಲಿ ಚೈತನ್ಯ ತುಂಬಿಸಿ
ಕಳವಳ ಭಯಗಳ ದೂರ ಸರಿಸಿ

ಆತ್ಮವಿಶ್ವಾಸದಿ ಎಲ್ಲವನು ಎದುರಿಸಿ
ಮತ್ತೆ ಮತ್ತೆ ಪ್ರಯತ್ನಿಸಿ ಸಾಧಿಸಿ
ಉತ್ತಮ ಆವಿಷ್ಕಾರ ಮಾಡಿ ತೋರಿಸಿ
ಅತ್ಯಂತ ಎತ್ತರಕೆ ದೇಶ ಬೆಳೆಸಿ

ನಮ್ಮ ಹಿರಿಮೆ ನಮ್ಮ ಅಧ್ಯಾತ್ಮಿಕತೆಯು
ನಮ್ಮ ಹಿರಿಯರ ಕೊಡುಗೆ ಅತ್ಯಮೂಲ್ಯವು
ನಮ್ಮದನು ಬಿಟ್ಟು ಪರರ್ಹಿಂದೆ ಓಡದಿರಿ
ನಮ್ಮತನ ಉಳಿಸಿ ಕಲಿಸಿ ಬೆಳೆಸಿ

ಈಗಿಹುದು ನಿಮ್ಮಲ್ಲಿ ಶಕ್ತಿ ಅಪಾರ
ಬೀಗಿ ಬಳಲಿ ನೀವು ನೋವುಣ್ಣದಿರಿ
ಯೋಗಿ ಸಿರಿಹರಿ ಬೋಧನೆಯಂತೆ ಬಾಳಿರಿ
ಭೋಗಿಯಾಗದೆ ತ್ಯಾಗಿ ಯೋಗಿಯಾಗಿ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಕೂಡ್ಲಿಗಿಯಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ತಡೆ ಜಾಗೃತಿ

ಕೂಡ್ಲಿಗಿ, ಜ.12- ತಾಲ್ಲೂಕಿನ ನಾಗಲಾಪುರ ಗ್ರಾಮದಲ್ಲಿ ಬಳ್ಳಾರಿ ಅರಣ್ಯ ವಿಭಾಗ, ಕೂಡ್ಲಿಗಿ ಉಪವಿಭಾಗದಿಂದ ಆಯೋಜಿಸಲಾಗಿದ್ದ ಅರಣ್ಯ ಮತ್ತು ವನ್ಯಜೀವಿ ಸಂಕುಲವನ್ನು ಕಾಡ್ಗಿಚ್ಚಿನಿಂದ ರಕ್ಷಿಸುವುದು ಹಾಗೂ ವನ್ಯಜೀವಿ ಮತ್ತು ಮಾನವ ನಡುವಿನ ಸಂಘರ್ಷ ತಡೆಗಟ್ಟುವ ಕುರಿತಾದ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರಿನ ಹಾವು ಮತ್ತು ನಾನು ಸಂಸ್ಥೆಯ ವಿಪಿನ್‌ರಾಯ್ ಮಾತನಾಡಿ, ವನ್ಯಜೀವಿಗಳಿಗೂ ಮನುಷ್ಯನಂತೆ ಬದುಕಲು ಹಕ್ಕಿದೆ ಎಂದರಲ್ಲದೆ, ಪ್ರಾಣಿಗಳು ಬದುಕಲು ಕಾಡುಗಳಲ್ಲಿ ಮನುಷ್ಯ ಹಸ್ತಕ್ಷೇಪ ಮಾಡಬಾರದು ಎಂದು ತಿಳಿಸಿದರು. ಸಂಸ್ಥೆಯ ಸ್ಫೂರ್ತಿ ಮಾತನಾಡಿ, ಹಾವು ಕಡಿತ ಸಂಭವಿಸಿದಾಗ ಅನುಸರಿಸಬೇಕಾದ ಕ್ರಮಗಳು, ಚಿಕಿತ್ಸೆ ಕುರಿತು ತಿಳಿಸಿಕೊಟ್ಟರು.

ಕೂಡ್ಲಿಗಿ ವಲಯ ಅರಣ್ಯದ ವ್ಯಾಪ್ತಿಗೆ ಬರುವ ಕಾಡಿನಂಚಿನಲ್ಲಿರುವ ಗ್ರಾಮಗಳಾದ ಬಂಡ್ರಿ, ನಾಗಲಾಪುರ, ಪಾಲಯ್ಯನಕೋಟೆ, ಸುಂಕದಕಲ್ಲು, ಜರ್ಮಲಿಯಲ್ಲಿ ಅರಿವು ಹಾಗೂ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಕೂಡ್ಲಿಗಿ ಮತ್ತು ಗುಡೇಕೋಟೆ ವಲಯ ಅರಣ್ಯಾಧಿಕಾರಿ ರೇಣುಕಾ, ಕೂಡ್ಲಿಗಿ ಉಪ ಅರಣ್ಯಾಧಿಕಾರಿ ಕುಬೇರ, ಅರಣ್ಯ ರಕ್ಷಕರಾದ ನಾಗರಾಜ್, ಗೋವಿಂದಪ್ಪ, ಪ್ರಶಾಂತ್ ಯಾದವ್, ಗಂಗಾಧರ್, ಅರಣ್ಯ ವೀಕ್ಷಕ ನಾಗರಾಜ, ಪಂಪಯ್ಯ, ಗಣೇಶ್ ಹಾಗೂ ಇನ್ನಿತರರಿದ್ದರು.

## ಲಾಭ ಗಳಿಸಲು ಸಮಗ್ರ ಕೃಷಿ ನೀತಿ ಅಳವಡಿಸಿಕೊಳ್ಳಿ

**(1ನೇ ಪುಟದಿಂದ)** ಚರ್ಚಿಸಿ, ಅವರ ಸಮಸ್ಯೆ ಗಳು, ಅಹವಾಲುಗಳು, ಸಲಹೆ ಸೂಚನೆಗಳನ್ನು ಪಡೆಯಲಾಗುವುದು. 30 ಜಿಲ್ಲೆಗಳ ವರದಿಯನ್ನು ಕ್ರೋಢೀಕರಿಸಿ, ಸಮಸ್ಯೆಗಳಿಗೆ ಪರಿಹಾರೋಪಾಯ ಕಂಡುಕೊಳ್ಳಲು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ರೈತರಿಗೆ ಅನುಕೂಲ ಮಾಡಿಕೊಡಲು ಯತ್ನಿಸಲಾಗುವುದು ಎಂದರು.

ರೈತರು ಸಮಗ್ರ ಕೃಷಿ ನೀತಿ ಅಳವಡಿಸಿಕೊಳ್ಳಬೇಕು, ಕೋವಿಡ್ ಕಾರಣ ಯುವಕರು ಗ್ರಾಮಗಳಿಗೆ ಮರಳಿದ್ದಾರೆ. ಯುವಕರು ಮಾರುಕಟ್ಟೆ ಪ್ರವೇಶಿಸಬೇಕು. ಹಳ್ಳಿ ಹಳ್ಳಿಗಳಲ್ಲಿ ಸಹಕಾರ ಸಂಘಗಳು ಸ್ಥಾಪನೆಯಾಗಬೇಕು. ಸಹಕಾರ ಸಂಘಗಳ ಮೂಲಕ ಕೃಷಿ ಉತ್ಪನ್ನ ಮಾರಾಟವಾದಲ್ಲಿ ಮಧ್ಯವರ್ತಿಗಳ ಹಾವಳಿ ಇಲ್ಲವಾದರೆ ನೇರ ರೈತರ ಕೈಗೆ ಲಾಭ ಸೇರಲು ಸಾಧ್ಯ ಎಂದರು.

ರೈತರು ತಾವು ಬೆಳೆದ ಬೆಳೆ ಸಂಸ್ಕರಣೆ ಮಾಡುವುದನ್ನು ಕಲಿಯದಿದ್ದರೆ ಇದೇ ಪರಿಸ್ಥಿತಿ ಮುಂದಿನ 100 ವರ್ಷಗಳಾದರೂ ಬದಲಾಗುವುದಿಲ್ಲ. ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಇದೀಗ ಹೆಚ್ಚು ಚಾಲ್ತಿಯಲ್ಲಿದೆ. ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ರೈತರು ಮುಂದಾಗಬೇಕು ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ್ ಮಾತನಾಡಿ, 'ರೈತರೊಂದಿಗೆ ಒಂದು ದಿನ' ಅರ್ಥಪೂರ್ಣವಾದ ಕಾರ್ಯಕ್ರಮವಾಗಿದೆ. ಹವಾಮಾನ ವೈಪರೀತ್ಯದಿಂದ ರೈತರ ಬಾಳು ಹಸನಾಗುತ್ತಿಲ್ಲ. ಹೀಗಾಗಿ ಕೆರೆ ತುಂಬಿಸಿಕೊಟ್ಟರೆ ರೈತರಿಗೆ ಅನುಕೂಲವಾಗಲಿದೆ. ಹೊನ್ನಾಳಿ ತಾಲ್ಲೂಕಿನ ಕೆರೆಗಳನ್ನು ತುಂಬಿಸುವ ಯೋಜನೆಗೆ ಸದ್ಯದಲ್ಲೇ ರಾಜ್ಯ ಸರ್ಕಾರ ಅನುಮೋದನೆ ನೀಡಲಿದ್ದು, ಮುಖ್ಯಮಂತ್ರಿಗಳನ್ನು ಕರೆಯಿಸಿ, ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ, ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಇದು ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವ ಕಾರ್ಯಕ್ರಮವಾಗಿದೆ ಎಂದರು.

ಹೊನ್ನಾಳಿ ಕ್ಷೇತ್ರದ ಕೆರೆಗಳನ್ನು ತುಂಬಿಸಲು ಯೋಜನೆ ರೂಪಿಸಿದ್ದು ಕಳೆದ ವರ್ಷವೇ ಅನುಮೋದನೆ ದೊರೆಯಬೇಕಿತ್ತು. ಆದರೆ ಕೋವಿಡ್ ಕಾರಣ ಆರ್ಥಿಕ ತೊಂದರೆಯಿಂದ ವಿಳಂಬವಾಯಿತು. ಇದೀಗ 435 ಕೋಟಿ ರೂ.ಗಳ ಯೋಜನೆಗೆ ಅನುಮತಿ ದೊರೆತಿದ್ದು, ಶೀಘ್ರ ಸಚಿವ ಸಂಪುಟ ಅನುಮೋದನೆ ನೀಡಲಿದೆ ಎಂದರು.

ಚನ್ನಗಿರಿ ಶಾಸಕ ಮಾಡಾಳು ವಿರುಪಾಕ್ಷಪ್ಪ, ಶ್ರೀಗಂಧದಿಂದ ಪ್ರತಿ ಎಕರೆಗೆ 10 ಕೋಟಿ ರೂ. ಆದಾಯ ಪಡೆಯಲು ಸಾಧ್ಯವಿದೆ. ಇದಕ್ಕೆ ಬೇಕಾದ ನೆರವನ್ನು ನೀಡಲು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ನಿಗಮ ಸಿದ್ಧವಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶಾಂತಕುಮಾರಿ, ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯಕ್, ಸದಸ್ಯರುಗಳಾದ ವಿ. ಶೇಖರಪ್ಪ, ಉಮಾ ರಮೇಶ್, ಎಂ.ಆರ್. ಮಹೇಶ್, ಸುರೇಂದ್ರ ನಾಯ್ಕ, ದೀಪಾ ಜಗದೀಶ್, ಕೃಷಿ ಇಲಾಖೆ ನಿರ್ದೇಶಕ ಬಿ.ವೈ. ಶ್ರೀನಿವಾಸ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ಪದ್ಮ ಬಸವಂತಪ್ಪ, ಜಂಟಿಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹಾಗೂ ಇತರರು ಉಪಸ್ಥಿತರಿದ್ದರು.

ಸಮಾರಂಭಕ್ಕೂ ಮುನ್ನ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್, ಕೃಷಿ ಸಚಿವ ಬಿ.ಸಿ. ಪಾಟೀಲ್, ಸಂಸದ ಜಿ.ಎಂ. ಸಿದ್ದೇಶ್ವರ್ ಸೇರಿದಂತೆ ಹಲವು ಗಣ್ಯರನ್ನು ಎತ್ತಿನಗಾಡಿಯಲ್ಲಿ ವಿಶೇಷ ಮೆರವಣಿಗೆ ಮೂಲಕ ಗ್ರಾಮಕ್ಕೆ ಕರೆತರಲಾಯಿತು. ಪೂರ್ಣಕುಂಭ ಹೊತ್ತ ಮಹಿಳೆಯರು ಗಣ್ಯರಿಗೆ ಸಾಂಪ್ರದಾಯಿಕ ಸ್ವಾಗತ ಕೋರಿದರು.

ವೇದಿಕೆ ಸಮಾರಂಭಕ್ಕೂ ಪೂರ್ವದಲ್ಲಿ ಕೃಷಿ ಸಚಿವರು ಕಮ್ಮಾರಗಟ್ಟೆ ಗ್ರಾಮದಲ್ಲಿ ಶ್ರೀನಿವಾಸ ಪಾಟೀಲ್ ಎಂಬ ರೈತರು ವೈಜ್ಞಾನಿಕವಾಗಿ ಗೋಮೂತ್ರ ಸಂಸ್ಕರಿಸಿ ಲಾಭದಾಯಕವಾಗಿ ಮಾರಾಟ ಮಾಡುತ್ತಿರುವ ವಿವರ ಪಡೆದುಕೊಂಡರು, ಬಳಿಕ ಭತ್ತ ನಾಟಿ ಯಂತ್ರದ ಮೂಲಕ ಹೊಸದಲ್ಲಿ ಭತ್ತ ನಾಟಿ ಮಾಡಿದರು. ಇಲ್ಲಿನ ಹಳ್ಳಿಕಟ್ಟೆಯಲ್ಲಿ ರೈತರೊಂದಿಗೆ ಸಂವಾದ ನಡೆಸಿ, ಅವರಿಂದ ಅವಹಾಲು ಹಾಗೂ ಸಲಹೆಗಳನ್ನು ಪಡೆದುಕೊಂಡರು. ಆರುಂಡಿ ಗ್ರಾಮದಲ್ಲಿ ಹೊಲದಲ್ಲಿ ನೆಲ ಸಮತಟ್ಟುಗೊಳಿಸುವ ಕೃಷಿಯಂತ್ರವನ್ನು ಚಾಲನೆ ಮಾಡಿ, ಅನುಭವ ಹಂಚಿಕೊಂಡರು.

## ಹರ್ಷಾನಂದ ವಿಧಿವಶ

**(1ನೇ ಪುಟದಿಂದ)** ಎಂಬುದು ಅವರ ಮಹತ್ತರ ಕೃತಿಯಾಗಿದೆ.

ಸ್ವಾಮೀಜಿ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಕನ್ನಡದಲ್ಲೇ ಟ್ವಿಟ್ ಮಾಡಿ ಸಂತಾಪ ಸೂಚಿಸಿದ್ದಾರೆ.

ಸ್ವಾಮಿ ಹರ್ಷಾನಂದ್ ಜೀ ಮಹಾರಾಜ್ ಅವರು ಸಮಾಜದ ಒಳಿತಿಗಾಗಿ ಅವಿಶ್ರಾಂತವಾಗಿ ಶ್ರಮಿಸಿದ್ದರು. ಅವರ ಸಹಾನುಭೂತಿಯ ಸ್ವಭಾವ ಮತ್ತು ವಿವಿಧ ಶ್ರೇಣಿಯ ವಿಷಯಗಳ ಬಗ್ಗೆ ಅವರಿಗಿದ್ದ ಸೂಕ್ಷ್ಮ ಜ್ಞಾನವನ್ನು ಮರೆಯಲು ಸಾಧ್ಯವೇ ಇಲ್ಲ. ಅವರ ಭಕ್ತವೃಂದಕ್ಕೆ ಸಂತಾಪವನ್ನು ಸೂಚಿಸುತ್ತೇನೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಹ ಸಂತಾಪ ವ್ಯಕ್ತಪಡಿಸಿದ್ದು, ಸ್ವಾಮಿ ಹರ್ಷಾನಂದ ಅವರು ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಎತ್ತಿ ಹಿಡಿದ ವಿದ್ವಾಂಸರು. ಅವರು ಉತ್ತಮ ವಾಗ್ಮಿಗಳೂ ಆಗಿದ್ದರು. ಭಗವಂತನು ಅವರಿಗೆ ಮೋಕ್ಷವನ್ನು ಕರುಣಿಸಲಿ. ಅವರ ಅನುಯಾಯಿಗಳಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಹೇಳಿದ್ದಾರೆ.

## ಗುಲಾಬಿ ಆಂದೋಲನದಿಂದ ಜಾಗೃತಿ



ಹರಿಹರ

ಹರಿಹರ, ಜ.12- ರಾಷ್ಟ್ರೀಯ ಯುವಕರ ದಿನಾಚರಣೆ ಅಂಗವಾಗಿ ನಗರದಲ್ಲಿ ಇಂದು ಗುಲಾಬಿ ಆಂದೋಲನದ ಮೂಲಕ ಜಾಗೃತಿ ಮೂಡಿಸಲಾಯಿತು. ತಂಬಾಕಿನಿಂದ ಯುವ ಪೀಳಿಗೆ ದುಶ್ಚಟಗಳಿಗೆ ಬಲಿಯಾಗುತ್ತಿದ್ದು, ಅದನ್ನು ತಪ್ಪಿಸಲು ಸರ್ಕಾರ ಗುಲಾಬಿ ಆಂದೋಲನದ ಮೂಲಕ ಜಾಗೃತಿ ಮೂಡಿಸುವ ಕಾರ್ಯವನ್ನು ಹಮ್ಮಿಕೊಂಡಿದ್ದು, ದಾವಣಗೆರೆ ಉಪ ವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡ್ರು ಚಾಲನೆ ನೀಡಿದರು.

## ನಾಳೆ ಜನಪದ ಸಂಗೀತ ಸಂಕ್ರಾಂತಿ



ಹರಪನಹಳ್ಳಿ

ಹರಪನಹಳ್ಳಿ,ಜ.12- ಮಾಜಿ ಶಾಸಕ ದಿ.ಎಂ.ಪಿ. ರವೀಂದ್ರ ಪ್ರತಿಷ್ಠಾನ ಹಾಗೂ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅಭಿಮಾನಿ ಬಳಗದ ವತಿಯಿಂದ ತಾಲ್ಲೂಕಿನ ಕಡತಿ ಮತ್ತು ನಂದ್ಯಾಲ ರಸ್ತೆಯ ಮಧ್ಯ ಭಾಗದಲ್ಲಿರುವ ತುಂಗಭದ್ರಾ ನದಿ ದಡದಲ್ಲಿ ನಾಡಿದ್ದು ದಿನಾಂಕ 14ರ ಗುರುವಾರ 'ಮಕರ ಸಂಕ್ರಾಂತಿ ಔತಣಕೂಟ ಮತ್ತು ಜನಪದ ಸಂಗೀತ ಸಂಕ್ರಾಂತಿ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಎಳ್ಳು ಬೆಲ್ಲದ ಜೊತೆಗೆ ಸಿಹಿ ಭೋಜನದೊಂದಿಗೆ ಸಂಕ್ರಾಂತಿ ಸಂಭ್ರಮದಲ್ಲಿ ಭಾಗಿಯಾಗೋಣ ಎಂದು ಕೆಪಿಸಿಸಿ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

## ವಿಮಾನಗಳೇರಿ 13 ನಗರ ತಲುಪಿದ ಲಸಿಕೆ

**(1ನೇ ಪುಟದಿಂದ)** ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಪುಣೆಯ ಘಟಕದಿಂದ ಲಸಿಕೆಗಳನ್ನು ಬೆಳಿಗ್ಗೆ 5 ಗಂಟೆಗೆ ಮೂರು ಲಾರಿಗಳಲ್ಲಿ ಹೊರ ತರುವಾಗ ಪೂಜೆ ನಡೆಸಲಾಯಿತು. ನಂತರ ಲಸಿಕೆಗಳನ್ನು 15 ಕಿ.ಮೀ. ದೂರದಲ್ಲಿರುವ ವಿಮಾನ ನಿಲ್ದಾಣಕ್ಕೆ ತರಲಾಯಿತು. ಅಲ್ಲಿಂದ ದೇಶದ ವಿವಿಧೆಡೆಯ ನಗರಗಳಿಗೆ ಲಸಿಕೆಗಳನ್ನು ರವಾನಿಸಲಾಯಿತು.

ಈ ಬಗ್ಗೆ ಹೇಳಿಕೆ ನೀಡಿರುವ ಸೆರಮ್ ಇನ್‌ಸ್ಟಿಟ್ಯೂಟ್‌ನ ಸಿಇಒ ಅದರ್ ಪೂನಾವಾಲಾ, ಇದು ನಮ್ಮ ವಿಜ್ಞಾನಿಗಳು ಹಾಗೂ ಸಂಬಂಧಿಸಿದವರಿಗೆ ಹೆಮ್ಮೆಯ ಹಾಗೂ ಐತಿಹಾಸಿಕ ಕ್ಷಣ. ಅವರು ವರ್ಷದಲ್ಲೇ ಲಸಿಕೆ ರೂಪಿಸಲು ಅಪಾರ ಶ್ರಮಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ಸಂಸ್ಥೆಯು ಕೇಂದ್ರ ಸರ್ಕಾರಕ್ಕೆ 200 ರೂ.ಗಳಂತೆ ಲಸಿಕೆ ಪೂರೈಸಿದೆ. ಇದು ವಿಶ್ವದಲ್ಲೇ ಅತಿ ಕಡಿಮೆ ವೆಚ್ಚದ ಲಸಿಕೆಗಳಲ್ಲಿ ಒಂದಾಗಿದೆ. ಪ್ರಧಾನ ಮಂತ್ರಿಯವರ ದೃಷ್ಟಿಕೋನ ಹಾಗೂ ದೇಶದ ಜನ ಸಾಮಾನ್ಯರನ್ನು ಬೆಂಬಲಿಸಲು ವಿಶೇಷ ದರದಲ್ಲಿ ಲಸಿಕೆ ಪೂರೈಸಲಾಗಿದೆ ಎಂದವರು ತಿಳಿಸಿದ್ದಾರೆ. ಅಗತ್ಯ ಅನುಮತಿ ಪಡೆದ ನಂತರ ಲಸಿಕೆಗಳನ್ನು ಖಾಸಗಿ ಮಾರುಕಟ್ಟೆಯಲ್ಲಿ ಪ್ರತಿ ಲಸಿಕೆಗೆ 1,000 ರೂ.ಗಳಂತೆ ಮಾರಲಾಗುವುದು ಎಂದೂ ಅವರು ಹೇಳಿದ್ದಾರೆ.

ಟ್ವಿಟ್ಟರ್ ಮೂಲಕ ಹೇಳಿಕೆ ನೀಡಿರುವ ನಾಗರಿಕ ವಿಮಾನಯಾನ ಖಾತೆ ಸಚಿವ ಹರ್‌ದೀಪ್ ಸಿಂಗ್ ಪುರಿ, ದೆಹಲಿ, ಚೆನ್ನೈ, ಕೊಲ್ಕೊತಾ, ಗುವಾಹತಿ, ಶಿಲ್ಲಾಂಗ್, ಅಹಮದಾಬಾದ್, ಹೈದರಾಬಾದ್, ವಿಜಯವಾಡ, ಭುವನೇಶ್ವರ, ಪಾಟ್ನಾ, ಬೆಂಗಳೂರು, ಲಖ್ನೌ ಹಾಗೂ ಚಂಡೀಘಡಗಳಿಗೆ 56.5 ಲಕ್ಷ ಡೋಸ್ ಲಸಿಕೆ ತಲುಪಿಸಲಾಗಿದೆ ಎಂದಿದ್ದಾರೆ.

ಸ್ಪೈಸ್‌ಜೆಟ್, ಗೋಏರ್ ಹಾಗೂ ಇಂಡಿಗೋ ವಿಮಾನಗಳು ಲಸಿಕೆಗಳನ್ನು ಪುಣೆಯಿಂದ ಬೇರೆ ಬೇರೆ ನಗರಗಳ ವಿಮಾನ ನಿಲ್ದಾಣಗಳಿಗೆ ರವಾನಿಸಿವೆ. ಲಸಿಕೆಗಳನ್ನು ರವಾನಿಸುವುದಕ್ಕೆ ಮುಂಚೆ ವಿಮಾನ ನಿಲ್ದಾಣದಲ್ಲೂ ಪೂಜೆ ಕೈಗೊಳ್ಳಲಾಯಿತು.

ಇದೇ ವೇಳೆ ಭಾರತ್ ಬಯೋಟೆಕ್‌ನಿಂದ 55 ಲಕ್ಷ ಡೋಸ್‌ಗಳ ಲಸಿಕೆಯನ್ನು ರವಾನಿಸಲಾಗಿದೆ. ಭಾರತ್ ಬಯೋಟೆಕ್ ದೇಶೀಯವಾಗಿ ಲಸಿಕೆ ರೂಪಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ಪ್ರತಿ ಲಸಿಕೆಗೆ 295 ರೂ.ಗಳಂತೆ 38.5 ಲಕ್ಷ ಡೋಸ್ ಖರೀದಿ ಮಾಡಲಾಗಿದೆ. 16.5 ಲಕ್ಷ ಡೋಸ್‌ಗಳನ್ನು ಉಚಿತವಾಗಿ ನೀಡಲಾಗಿದೆ. ಅಂತಿಮವಾಗಿ ಲಸಿಕೆಯ ಬೆಲೆ ಡೋಸ್‌ಗೆ 206 ರೂ. ಆಗಲಿದೆ ಎಂದಿದ್ದಾರೆ.

## ಖಾದಿ ಪ್ರಾಕೃತಿಕ ಪೇಂಟ್ ಬಿಡುಗಡೆ

**(1ನೇ ಪುಟದಿಂದ)** ಅವರು ತಿಳಿಸಿದ್ದಾರೆ.

ಖಾದಿ ಪ್ರಾಕೃತಿಕ ಪೇಂಟ್ ವಿಶಿಷ್ಟ ರೀತಿಯಲ್ಲಿ ಮೊದಲ ಬಾರಿಗೆ ರೂಪುಗೊಂಡಿದೆ. ಇದರಲ್ಲಿ ಆಕಳ ಸೆಗಣಿ ಪ್ರಮುಖ ಭಾಗವಾಗಿದೆ. ಇದು ಕಡಿಮೆ ವೆಚ್ಚದ್ದು ಹಾಗೂ ವಾಸನೆ ರಹಿತದ್ದಾಗಿದೆ. ಇದು ಭಾರತೀಯ ಮಾನದಂಡಗಳ ದಳದ ಪ್ರಮಾಣ ಪತ್ರ ಪಡೆದಿದೆ.

ಖಾದಿ ಪ್ರಾಕೃತಿಕ ಪೇಂಟ್ 6,000 ಕೋಟಿ ರೂ.ಗಳ ಉದ್ಯಮವಾಗಲಿದೆ. ಈ ಪೇಂಟ್ ಮಾರುಕಟ್ಟೆಯಲ್ಲಿ ಲಭ್ಯವಿರುವ ಅನ್ಯ ಪೇಂಟ್‌ಗಳಿಗಿಂತ ಉತ್ತಮವಾಗಿದೆ. ಇದರ ಬೆಲೆ ಲೀಟರ್‌ಗೆ 225 ರೂ. ಬೇರೆ ಬ್ರಾಂಡ್‌ಗಳ ಬೆಲೆ ಲೀಟರ್‌ಗೆ 550 ರೂ.ಗಳವರೆಗೂ ಇದೆ ಎಂದು ಗಡ್ಕರಿ ತಿಳಿಸಿದ್ದಾರೆ.

ಸಣ್ಣ ಉದ್ಯಮಗಳು ದೇಶದ ಆರ್ಥಿಕತೆಗೆ ಶೇ.50ರಷ್ಟು ಕೊಡುಗೆ ನೀಡುವಂತಾಗಬೇಕು ಎಂಬುದು ಸರ್ಕಾರದ ಗುರಿಯಾಗಿದೆ. ಪ್ರಸಕ್ತ ಈ ವಲಯ ಆರ್ಥಿಕತೆಗೆ ಶೇ.30ರಷ್ಟು ಕೊಡುಗೆ ನೀಡುತ್ತಿದೆ ಎಂದು ಸಚಿವರು ಹೇಳಿದ್ದಾರೆ.

ಈ ಉದ್ಯಮದಿಂದಾಗಿ ಕೆ.ವಿ.ಐ.ಸಿ. ವಹಿವಾಟು ಮುಂದಿನ ಐದು ವರ್ಷಗಳಲ್ಲಿ 80 ಸಾವಿರ ಕೋಟಿ ರೂ.ಗಳಿಂದ 5 ಲಕ್ಷ ಕೋಟಿ ರೂ.ಗಳಿಗೆ ತಲುಪಲಿದೆ ಎಂದವರು ಹೇಳಿದ್ದಾರೆ.

ಬಣ್ಣದಲ್ಲಿ ಹಸುವಿನ ಸೆಗಣಿಯನ್ನು ಪ್ರಮುಖವಾಗಿ ಬಳಸಲಾಗುತ್ತದೆ. ಇದರಿಂದಾಗಿ ಹಾಲು ಕೊಡುವುದನ್ನು ನೀಡುವ ಹಸುಗಳೂ ಆಸ್ತಿಗಳಾಗಿ ಪರಿವರ್ತನೆಯಾಗಲಿವೆ. ಸರ್ಕಾರದ ಕ್ರಮದಿಂದ ಕೃಷಿ, ಗ್ರಾಮೀಣ ಆರ್ಥಿಕತೆ ಬಲವಾಗಲಿದೆ ಎಂದು ಗಡ್ಕರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಖಾದಿ ಪ್ರಾಕೃತಿಕ ಪೇಂಟ್ ಡಿಸ್ಟೆಂಪರ್ ಹಾಗೂ ಪ್ಲಾಸ್ಟಿಕ್ ಎಮಲ್ಷನ್ ಎಂಬ ಎರಡು ಸ್ವರೂಪದಲ್ಲಿ ಲಭ್ಯವಾಗಲಿವೆ. ಇದು ಆಂಟಿಫಂಗಲ್ ಹಾಗೂ ಆಂಟಿ ಬ್ಯಾಕ್ಟೀರಿಯಾ ಆಗಿರಲಿದೆ. ಇದರಲ್ಲಿ ಹಾನಿಕಾರಕ ಲೋಹದ ಅಂಶಗಳು ಇರುವುದಿಲ್ಲ. ಎಂದು ಸಚಿವರು ಹೇಳಿದ್ದಾರೆ.


**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ, 40x50 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಮನೆ, ಸೈಟು ಖರೀದಿಗೆ ಬೇಕಿದೆ**
ಕಿರಣ್ ಬೂಸ್ನೂರ್ (ಏಜೆಂಟ್)
ಆಫೀಸ್ : ಲ್ಯಾಂಡ್ ಲಿಂಕ್ಸ್, ರಿಯಲ್ ಎಸ್ಟೇಟ್ ಏಜೆನ್ಸಿ ನಯನಾ'ಸ್ ಕಾಂಪ್ಲೆಕ್ಸ್, ಬಿಇಟಿ ಕಾಲೇಜ್ ರೋಡ್, ಬಾಪೂಜಿ ಬ್ಯಾಂಕ್ ಹೇಮಾವತಿ ಹಾಸ್ಟೆಲ್ ಹತ್ತಿರ.
97315-63409, 98440-63409
(ರಿಯಲ್ ಎಸ್ಟೇಟ್ ಏಜೆಂಟರಿಗೂ ಅವಕಾಶವಿದೆ)

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ, 38 1/2 x40 ಪಶ್ಚಿಮ, 30x40 ಪೂರ್ವ ಮನೆ, ನಿಜಲಿಂಗಪ್ಪ ಬಡಾವಣೆ 30x40 ಉತ್ತರ ಮನೆ, ನಿಜಲಿಂಗಪ್ಪ ಬಡಾವಣೆ, 30x35 ಉತ್ತರ ಬಾಗಿಲು ಪಶ್ಚಿಮ ದಿಕ್ಕು, 2 ಮನೆ 1 ಪೂರ್ವ ಮನೆ 30x40 ಮಲ್ಲಿಕಾರ್ಜುನ್ ಬಡಾವಣೆ, ವಾಜಪೇಯಿ ಬಡಾವಣೆ 34x40 ಪೂರ್ವ, 30x40 ಪೂರ್ವ, 30x50 ಪಶ್ಚಿಮ (ಶಾಮನೂರು) 30x55 ಪೂರ್ವ ಸೈಟ್ ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ**
ನಾಗನೂರಿನಲ್ಲಿ ಹಾಲಿನ ಡೈರಿ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ. : 94489 66128

**ಸೈಟುಗಳು ಮಾರಾಟಕ್ಕಿವೆ**
ಶಿವಗಂಗಾ ಕಲ್ಯಾಣ ಮಂಟಪದ ಹತ್ತಿರ ಮಹಾಲಕ್ಷ್ಮಿ ಲೇ ಔಟ್‌ನಲ್ಲಿ 30×40 South, 74x40 North East Corner, 35x68 East
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**3 BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತಾರಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಮನೆಗಳು ಮಾರಾಟಕ್ಕಿವೆ**
ಕುವೆಂಪು ಬಡಾವಣೆಯಲ್ಲಿ SS 'B' Blockನಲ್ಲಿ 40×60 North ಮೂರು ಬೆಡ್ ರೂಂ. ಮನೆ. 35×46 ಎರಡು ಬೆಡ್ ರೂಂ ಮನೆ, North East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**WANTED**
1) Office Boy / Sales Rep -1
2) Driver - 1
Preferably Ritired
Scientific Fuel Injections
Near to Hotel Shoven (Kini Towers)
Near D.C. Office, P.B.Road, Davangere-06. Ph : 08192-254724
Timings : 10 am to 6 pm

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x46 ಪೂರ್ವ, 30x44 ಪೂರ್ವ, 30x57 ಪೂರ್ವ, ಹೊಸ ಬನಶಂಕರಿ ಲೇಔಟ್‌ನ ಡಾ॥ ಲೇಔಟ್‌ನಲ್ಲಿ 30x50 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ರೋಗಿಗಳಿಗೆ ಅಡುಗೆ ಮಾಡಲು ಹೆಂಗಸು (1) ಬೇಕಾಗಿದ್ದಾರೆ. ಆಸ್ಪತ್ರೆಯಲ್ಲೇ ತಂಗಲು ವ್ಯವಸ್ಥೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
08192-252228
86186 42929

**ನಾನ್ ವೆಜ್ ಭಟ್ರು ಬೇಕಾಗಿದ್ದಾರೆ.**
95130 33363

**ಬೇಕಾಗಿದ್ದಾರೆ**
ಆಧುನಿಕ ಸೈಕಲ್ ಸರ್ವೀಸ್ ಸೆಂಟರ್‌ನಲ್ಲಿ ಸರ್ವೀಸ್ ಅಡ್ವೈಸರ್ ಆಗಿ ಕೆಲಸ ಮಾಡಲು, ಅನುಭವವಿರುವವರು ಬೇಕಾಗಿದ್ದಾರೆ. ತಮ್ಮ ಪರಿಚಯ ಪತ್ರದೊಂದಿಗೆ ಭೇಟಿಯಾಗಿರಿ
ಅಗಡಿ ಮೋಟರ್ಸ್ ಟ್ರ್ಯಾಕ್ & ಟ್ರೇಲ್
ಶಿವಯೋಗಾಶ್ರಮ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**WANTED**
Sales Executive for E-cycles B. com, sales skill, Basi computer Knowledage. walk in with Resume
Track & Trail Store
Murugharajendra Complex, Hadadi Road, Davanagere.

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದಲ್ಲಿ ಬಸ್ ಸ್ಟ್ಯಾಂಡ್‌ನ ಹತ್ತಿರ ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿ ಎಸ್.ಎಂ. ಲಾಡ್ಜ್ ಹತ್ತಿರ, ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ.
98444 33504

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಉತ್ಸಾಹಿ ಹುಡುಗರು/ ಯುವಕರು ಕಮೀಷನ್ ಆಧಾರದ ಮೇಲೆ ಫುಡ್ ಡಿಲೆವರಿ ಮಾಡಲು ತಕ್ಷಣ ಬೇಕಾಗಿದ್ದಾರೆ.
91640 78078
99022 72893

**PWD & NAVODAYA COACHING**
New Batches Started
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಬೇಕಾಗಿದ್ದಾರೆ**
ಹರಿಹರದ ವೈನ್ ಶಾಪ್‌ಗಳಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಬಿಲ್ಲಿಂಗ್ ಆಪರೇಟರ್, ಕ್ಯಾಷಿಯರ್, ವೆಂಡರ್, ಸಪ್ಲೈಯರ್ ಬೇಕಾಗಿದ್ದಾರೆ.
(ಸ್ಥಳೀಯರಿಗೆ ಮಾತ್ರ)
99726 98591

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿ ವಾಸ್ತು ಪ್ರಕಾರ 3 BHK, ನೀರಿನ ಸೌಕರ್ಯ ಇರುವ ಮನೆ ಸಪ್ತಗಿರಿ ಹಾಸ್ಟೆಲ್ ಹಿಂಭಾಗ ಕುಂದವಾಡ ರಸ್ತೆ, ಬಸವೇಶ್ವರ ನಗರದಲ್ಲಿ ಲೀಸ್‌ಗೆ ಇರುತ್ತದೆ. ಸಂಪರ್ಕಿಸಿ:
98443 03551
94481 15270

**JOBS**
MCS ACADEMY
Training & Placement Cell
98444 92888

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ತಕ್ಷಣ ಬೇಕಾಗಿದ್ದಾರೆ**
ವೇಟರ್ಸ್, ಕ್ಯಾಪ್ಟನ್, ಕ್ಲೀನಿಂಗ್ ಆಕರ್ಷಕ ಸಂಬಳ ನೀಡಲಾಗುವುದು.
93809 74740

**ಯುವಕರಿಗೆ ಸುವರ್ಣಾವಕಾಶ**
ಎಸ್‌ಎಸ್‌ಎಲ್‌ಸಿ/ಪಿಯುಸಿ ಮುಗಿಸಿದ್ದೀರಾ, ಕೆಲಸವಿಲ್ಲವೇ ? ಇಲ್ಲಿದೆ ಅವಕಾಶ.
ಆಯುರ್ವೇದ ಚಿಕಿತ್ಸೆಯಲ್ಲಿ ಉಚಿತವಾಗಿ ತರಬೇತಿ ಕೊಟ್ಟು ಆಸ್ಪತ್ರೆಯಲ್ಲೇ ಕೆಲಸ ಕೊಡಲಾಗುವುದು. ಸಂಪರ್ಕಿಸಿ :
08192-252228
86186 42929

*** BASIC - 900/-**
*** DTP - 900/-**
*** TALLY - 2200/-**
DOOR TO DOOR COACHING
97426 10385

**ಬೇಕಾಗಿದ್ದಾರೆ**
ಅಡುಗೆ ಭಟ್ರು, ಸಪ್ಲೈಯರ್, ಕ್ಲೀನರ್, ಹೋಟೆಲ್‌ನಲ್ಲಿ ಕೆಲಸ ಮಾಡಲು ಆಸಕ್ತರು ಬೇಕಾಗಿದ್ದಾರೆ.
99861 17995

**ಬೇಕಾಗಿದ್ದಾರೆ**
ರಾಜಲಕ್ಷ್ಮಿ ಫಾರ್ಮಾ (Whole Sale)ದಲ್ಲಿ ಕೆಲಸ ಮಾಡಲು ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ. ESI, PF ಸೌಲಭ್ಯವಿರುತ್ತದೆ. PJ Extension, 7th Main, 7th Cross, Davangere.
Ph. 9606048402

**ನಿವೇಶನದ ಹಕ್ಕು ಪತ್ರ ಕಳೆದಿದೆ**
ಬಂಗೇರ ಶೇಖರಪ್ಪ ಬಿನ್ ಸಿದ್ದಪ್ಪ ಇವರ ಹೆಸರಿನಲ್ಲಿರುವ ಹಕ್ಕು ಪತ್ರ ಸೈಟ್ ನಂ.23 ಹೊಸ ಬೆಳವನೂರು ಗ್ರಾಮ ನವೆಂಬರ್ 2020ರಲ್ಲಿ ಹಕ್ಕು ಪತ್ರವನ್ನು ಜೆರಾಕ್ಸ್ ಮಾಡಿಸಲು ಹೋದಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.
87489 66395

**ಗೋಡೌನ್ ಬಾಡಿಗೆಗೆ ಇದೆ**
ಹೊಸಪೇಟೆ ರಸ್ತೆ ಗುತ್ತೂರು ಕ್ರಾಸ್‌ನಲ್ಲಿ ಇರುವ ಇಂಡಸ್ಟ್ರೀ ಅಥವಾ ಗೋಡೌನ್ ಸಲುವಾಗಿ ಉಪಯೋಗವಾಗುವ 20 ಗುಂಟೆ ಜಾಗ ಸುತ್ತಲೂ ಕಾಂಪೌಂಡ್ ಇರುವ 105x80 ಅಳತೆಯ ಶೆಡ್ ಬಾಡಿಗೆಗೆ ಇದೆ.
ಫೋ.98444 13339

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಸಂಘ ಸಂಸ್ಥೆಗಳ, ಟ್ರಸ್ಟ್, GST ರಿಜಿಸ್ಟ್ರೇಷನ್ & ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಬೇಕಾಗಿದ್ದಾರೆ**
ಆಪೆ ಆಟೋ ಡೀಜೆಲ್ ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್‌ಪಿಜಿ, ತ್ರಿಚಕ್ರ ವಾಹನಗಳ
ಡೀಸೆಲ್ ಮೆಕ್ಯಾನಿಕ್ಸ್-4
ಕಂಪ್ಯೂಟರ್ ಆಪರೇಟರ್ -4
ಸ್ಪೇರ್ ಪಾರ್ಟ್ಸ್ ಮ್ಯಾನೇಜರ್-2
ಆಸಕ್ತರು ಸೂಕ್ತ ದಾಖಲಾತಿಗಳೊಂದಿಗೆ ನೇರವಾಗಿ ಸಂಪರ್ಕಿಸಿ: ಸಮಯ : ಮ 3 ರಿಂದ 6.
ಫೋನ್/ಮೊಬೈಲ್ ವಿಚಾರಣೆ ಇರುವುದಿಲ್ಲ.
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ.

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**WANTED**
Cashier, Sales girls
Computer Operator
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**State Bank of India ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳೆಯರು ಸಂಪರ್ಕಿಸಿ:
ಮೊ.70193-10599

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9.00 ರಿಂದ ಸಂಜೆ 8:00 ರವರೆಗೆ
ಸಂಪರ್ಕಿಸಿ:
ಕಶೆಟ್ಟರ್ ಇಂಡಸ್ಟ್ರಿಯಲ್ ಎಸೆನ್ಸಿಯಲ್ಸ್
ಲಾಯರ್ ರಸ್ತೆ, ಟೈರ್ ಅಂಗಡಿಗಳ ಹತ್ತಿರ, ದಾವಣಗೆರೆ.

**ಹೋಟೆಲ್ ಕೆಲಸಕ್ಕೆ ಭಟ್ಟರು ಬೇಕಾಗಿದ್ದಾರೆ**
ಸಂಪರ್ಕಿಸಿ
78928 34945

# ಆಯವ್ಯಯದಲ್ಲಿ ಅನುದಾನ ಮೀಸಲು, ಸೌಲಭ್ಯಗಳ ಪ್ರಾಧಾನ್ಯತೆಗೆ ಮನವಿ

ದಾವಣಗೆರೆ, ಜ.12- ಮಕ್ಕಳ ಚಟುವಟಿಕೆಗೆ ಅನುದಾನ ಮೀಸಲಿಡಬೇಕು, ಎಸ್ಸಿ, ಎಸ್ಟಿ ಅನುದಾನ ಆ ಸಮುದಾಯಕ್ಕೆ ಬಳಕೆಯಾಗಬೇಕು. ಜೀವ ವೈವಿಧ್ಯ ಚಟುವಟಿಕೆಗೆ ಅನುದಾನ ಮೀಸಲಿಡುವುದು, ನಾಗರಿಕರ ಮೂಲಭೂತ ಸೌಲಭ್ಯಗಳಿಗೆ ಆಯವ್ಯಯದಲ್ಲಿ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು, ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಯ ಪ್ರಗತಿ ಮತ್ತು ಅನುದಾನ ಸದ್ಬಳಕೆ ಸೇರಿದಂತೆ ಪಾಲಿಕೆ ವ್ಯಾಪ್ತಿಯ ಕುಂದು-ಕೊರತೆಗಳ ನಿವಾರಣೆ ಕಾರ್ಯಗತವಾಗಿಸುವ ಬಗ್ಗೆ ನಗರ ಪಾಲಿಕೆಯ ಆಯವ್ಯಯ ತಯಾರಿಕೆಯ ಪೂರ್ವಭಾವಿ ಸಭೆಯಲ್ಲಿ ಸಲಹೆಗಳು ವ್ಯಕ್ತವಾದವು.

ಪಾಲಿಕೆ ಸಭಾಂಗಣದಲ್ಲಿ ಮಹಾಪೌರರಾದ ಬಿ.ಜಿ. ಅಜಯ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ಸಾರ್ವಜನಿಕರು, ವಿವಿಧ ಸಂಘ-ಸಂಸ್ಥೆಗಳು ಸಲಹೆಗಳ ಮುಖೇನ ಗಮನ ಸೆಳೆದವು.

**ಮಕ್ಕಳ ಸ್ನೇಹಿ ಪಾಲಿಕೆಗೆ ಮನವಿ:** ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಮಾತನಾಡಿ, ನಗರ ಪಾಲಿಕೆಯ ಆಯ-ವ್ಯಯದಲ್ಲಿ ಮಕ್ಕಳ ಚಟುವಟಿಕೆಗೆ ಅನುದಾನ ಮೀಸಲಿಡಬೇಕು. ಈ ವಿಚಾರವಾಗಿ ಹಲವಾರು ಬಾರಿ ಮನವಿ ನೀಡಲಾಗಿದೆ. ಆದರೆ, ಕಾರ್ಯಗತವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್ ಅಜಯ್ ಕುಮಾರ್, ಮಕ್ಕಳ ಯಾವ ಚಟುವಟಿಕೆಗೆ ಅನುದಾನ ನೀಡಬಹುದು ಎಂದು ಕೇಳಿದಾಗ, ಆರು ವರ್ಷದಿಂದ 14 ವರ್ಷದೊಳಗಿನ ಮಕ್ಕಳ ಸಂಖ್ಯೆ ಎರಡು ಲಕ್ಷದಷ್ಟಿದೆ. ಈ ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮ, ಬೇಸಿಗೆ ಶಿಬಿರ, ವಿಜ್ಞಾನ ಸಮಾವೇಶ, ಪರಿಸರ ಶಿಬಿರ ಮತ್ತು ವಿಜ್ಞಾನ ಪ್ರವಾಸ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು. ಇವುಗಳಿಗೆ 2021-22ನೇ ಸಾಲಿನ ಆಯವ್ಯಯದಲ್ಲಿ ರೂ. 10 ಲಕ್ಷ ಮೀಸಲಿಡಬೇಕು. ಪಾಲಿಕೆ ಮಕ್ಕಳ ಸ್ನೇಹಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಗುರುಸಿದ್ಧಸ್ವಾಮಿ ಮನವಿ ಮಾಡಿದರು.

**ಜೀವ ವೈವಿಧ್ಯ ಸಂರಕ್ಷಣೆಗೆ ಒತ್ತು ನೀಡಿ:** ಪರಿಸರ ರಕ್ಷಣಾ ವೇದಿಕೆಯ ಅಧ್ಯಕ್ಷ ಗಿರೀಶ್ ಎಸ್. ದೇವರಮನೆ ಮಾತನಾಡಿ, ಜೀವ ವೈವಿಧ್ಯ ಚಟುಕವಟಿಕೆಗಳಿಗೆ ಈ ವರ್ಷದ ಆಯವ್ಯಯದಲ್ಲಿ 12 ಲಕ್ಷ ಅನುದಾನ ಮೀಸಲಿಡಬೇಕಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಜೀವ ವೈವಿದ್ಯತೆಯ ಸಮತೋಲನ ಕಾಪಾಡಲು ನಗರ ವ್ಯಾಪ್ತಿಯ ಸೂಕ್ಷ್ಮ ಜೀವಿಗಳು, ವಿಶೇಷ ಗಿಡ-ಮರಗಳು, ಪಾರಂಪರಿಕ ತಾಣಗಳು, ಕೆರೆಗಳ ಸಂರಕ್ಷಣೆಯ ಬಗ್ಗೆ ಚರ್ಚೆ, ಸಂವಾದದಂತಹ ಪೂರಕ ಚಟುವಟಿಕೆಗಳನ್ನು ನಡೆಸಬೇಕು. ಭವಿಷ್ಯದಲ್ಲಿ ಜೀವ ವೈವಿಧ್ಯ ಸಂರಕ್ಷಣೆಗಾಗಿ ಅಧ್ಯಯನ ಕೇಂದ್ರದ ಅಗತ್ಯವಿದ್ದು, ಅದಕ್ಕೆ ಬೇಕಾಗುವ ಸ್ಥಳ, ಅನುದಾನ ಆಯವ್ಯಯದಲ್ಲಿಟ್ಟು ಮಂಜೂರಾತಿ ನೀಡಬೇಕು. ಪಾಲಿಕೆ ವತಿಯಿಂದ



**ಮೇಯರ್ ಅಜಯ್ ಕುಮಾರ್ ಅಧ್ಯಕ್ಷತೆಯಲ್ಲಿ ಪಾಲಿಕೆ ಆಯ-ವ್ಯಯ ತಯಾರಿಕೆ ಪೂರ್ವಭಾವಿ ಸಭೆ**

> **ಇದು ಮೊದಲನೇ ಸಭೆಯಾಗಿದೆ. ಇನ್ನೂ 2-3 ಸಭೆಗಳನ್ನು ನಡೆಸಿ, ನಗರ ಪಾಲಿಕೆಯ ಆಯ-ವ್ಯಯದಲ್ಲಿ ನಗರದ ಅಭಿವೃದ್ಧಿ ಮತ್ತು ಜನರ ಅನುಕೂಲಕ್ಕಾಗಿ ಸಾರ್ವಜನಿಕರ ಸಲಹೆಗಳನ್ನು ಪರಿಗಣಿಸಿ ತುರ್ತು ಮತ್ತು ಅತ್ಯವಶ್ಯಕವಾದ ಅಂಶಗಳನ್ನು ಬಜೆಟ್‌ನಲ್ಲಿ ಸೇರಿಸಲು ಆದ್ಯತೆ ನೀಡಲಾಗುವುದು.**
>
> **- ವಿಶ್ವನಾಥ ಮುದಜ್ಜಿ, ಪಾಲಿಕೆ ಆಯುಕ್ತ.**

ಕನ್ನಡ ರಾಜ್ಯೋತ್ಸವ ಆಚರಿಸುವಂತೆ ಪರಿಸರ ದಿನಾಚರಣೆಯನ್ನೂ ಆಚರಿಸುವಂತಾಗಬೇಕಿದೆ. ಇದರಲ್ಲಿ ಪರಿಸರ ಸಂರಕ್ಷಣೆಯ ಕೆಲಸಗಳಿಗೆ ಹೆಚ್ಚಿನ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

**ಎಸ್ಸಿ-ಎಸ್ಟಿ ಅನುದಾನ ರಸ್ತೆ, ಚರಂಡಿ ಬಳಕೆಗೆ ಸಲ್ಲ:** ಸೋಮಲಾಪುರ ಹನುಮಂತಪ್ಪ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಬರುವ 24:10 ಅನುದಾನವನ್ನು ನಗರದ ರಸ್ತೆ, ಚರಂಡಿಗೆ ಬಳಕೆ ಮಾಡಿಕೊಳ್ಳಬಾರದು. ಈ ಸಮುದಾಯಕ್ಕೆ ಅನುಕೂಲವಾಗುವ ಸಮುದಾಯ ಭವನಗಳಿಗೆ ಬಳಕೆ ಮಾಡಿಕೊಳ್ಳಬೇಕು. ಈ ಬಾರಿಯ ಆಯ-ವ್ಯಯದಲ್ಲಿ ಇದಕ್ಕಾಗಿ ಅನುದಾನ ಮೀಸಲಿಡಬೇಕಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ದಲಿತ ಕೇರಿಗಳನ್ನೂ ಅಭಿವೃದ್ಧಿಪಡಿಸಬೇಕು. ಸಭೆಯಲ್ಲಿ ನೀಡಿದ ಸಲಹೆಗಳನ್ನು ಸಭೆಗಷ್ಟೇ ಸೀಮಿತವಾಗಿಸದೇ ಕಾರ್ಯರೂಪಕ್ಕೆ ತರಬೇಕೆಂದರು.

**ಎಂಎಸ್‌ಡಬ್ಲ್ಯೂ ಪದವೀಧರರಿಗೆ ಅವಕಾಶ ನೀಡಿ :** ಯುವಕ ಸಂತೋಷ್ ಮಾತನಾಡಿ, ಎಂಎಸ್‌ಡಬ್ಲ್ಯೂ ಓದಿದ ಪದವೀಧರರಿಗೆ ಪಾಲಿಕೆಯಲ್ಲಿ ಗುತ್ತಿಗೆ ಆಧಾರದಲ್ಲಿ ಉದ್ಯೋಗದ ಅವಕಾಶ ಕಲ್ಪಿಸಬೇಕು. ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಸಮಸ್ಯೆಗಳ ಅರಿವು ಮತ್ತು ಅವುಗಳನ್ನು ಸಮರ್ಥವಾಗಿ ಪರಿಹರಿಸುವ ಸಾಮರ್ಥ್ಯವಿದೆ. ಇದರಿಂದ ಪಾಲಿಕೆಗೂ ಅನುಕೂಲ. ಈ ಬಾರಿಯ ಬಜೆಟ್‌ನಲ್ಲಿ ಇದನ್ನು ಸೇರಿಸಬೇಕೆಂದರು.

**ವಿಕಲಚೇತನರಿಗೆ ಹೆಚ್ಚಿನ ಸೌಲಭ್ಯ ನೀಡಿ:** ಎನ್‌ಜಿಓ ಸಂಸ್ಥೆಯ ಸುರೇಶ್ ಮಾತನಾಡಿ, ವಿಕಲಚೇತನರಿಗೆ ಹೆಚ್ಚಿನ ಸೌಲಭ್ಯ ನೀಡಬೇಕು. ಅವರಿಗೆ ವಾಹನಗಳನ್ನು ಕೊಡುವ ಜೊತೆಗೆ ಉದ್ಯೋಗಕ್ಕಾಗಿ ಹೆಚ್ಚಿನ ಆದ್ಯತೆ ಕೊಟ್ಟು ಪ್ರೋತ್ಸಾಹಿಸಬೇಕು. ಅಂಗವಿಕಲತೆ ತಡೆಗೆ ಪಾಲಿಕೆ ಕ್ರಮ ಕೈಗೊಳ್ಳಬೇಕು. ಹುಟ್ಟಿದಂದಿನಿಂದ 10 ವರ್ಷ ವಿಕಲಚೇತನ ಮಕ್ಕಳಿಗೆ ಸೌಲಭ್ಯಗಳನ್ನು ಕೊಡುವಂತೆ ಕೋರಿದರು.

**ನಿರುದ್ಯೋಗಿ ಯುವಕರಿಗೆ ಪರವಾನಗಿ ನೀಡಿ:** ಕಳೆದ ಕೆಲ ವರ್ಷಗಳ ಹಿಂದೆ ನಿರುದ್ಯೋಗಿ ಯುವಕರು ಬದುಕು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಪಾಲಿಕೆಯಿಂದಲೇ ಕಾರು ಚಾಲನೆಯ ತರಬೇತಿ ಜೊತೆಗೆ ಬ್ಯಾಡ್ಜ್ ಸಹಿತ ಚಾಲನಾ ಪರವಾನಗಿ ನೀಡಲಾಗುತ್ತಿತ್ತು. ಆದರೀಗ ಅದನ್ನು ನಿಲ್ಲಿಸಿದ್ದು, ಆ ಯೋಜನೆ ಪುನರ್ ಕಾರ್ಯಗತಗೊಳಿಸುವಂತೆ ಮಲ್ಲಿಕಾರ್ಜುನ ಇಂಗಳದಾಳ್ ಕೋರಿದರು.

**ಶುಲ್ಕ ವಿಧಿಸಿ ನಿವೇಶನ ಸ್ವಚ್ಛತೆಗೆ ಆದ್ಯತೆ:** ಬಡಾವಣೆಯಲ್ಲಿನ ಹಂದಿ, ಮಂಗ, ನಾಯಿಗಳ ಹಾವಳಿ ನಿಯಂತ್ರಿಸುವಂತೆ ವಿವೇಕಾನಂದ ಬಡಾವಣೆಯ ನಾಗರಿಕರ ಸಮಿತಿ ಒತ್ತಾಯಿಸಿತಲ್ಲದೇ, ಖಾಲಿ ನಿವೇಶನಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತರು, ನಿವೇಶನಗಳ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಅದರ ಮಾಲೀಕರಿಗೆ ಸೂಚನೆ ನೀಡಲಾಗಿದ್ದರೂ ಕೆಲವರು ಮುಂದಾಗದ ಕಾರಣ ಪ್ರತಿ ಚದರಡಿಗೆ 10 ರೂ. ಶುಲ್ಕ ವಿಧಿಸಿ ಪಾಲಿಕೆಯಿಂದಲೇ ಸ್ವಚ್ಛತೆಗೆ ಕಾರ್ಯಪ್ರವೃತ್ತರಾಗುತ್ತೇವೆಂದರು.

ಸಭೆಯಲ್ಲಿ ಸಂಘ ಸಂಸ್ಥೆಗಳ ಮುಖಂಡರಾದ ಸಿದ್ದರಾಮಪ್ಪ, ಕೆ.ಜಿ. ನಾಗರಾಜ್ ಮತ್ತಿತರರು ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಉಪಮೇಯರ್ ಸೌಮ್ಯ ನರೇಂದ್ರ ಸೇರಿದಂತೆ ಇತರರು ಇದ್ದರು.

# ಅತಿ ಕಷ್ಟದ ದಿನಗಳಲ್ಲಿ ಮಾಧ್ಯಮ ಕ್ಷೇತ್ರ

## ಪತ್ರಕರ್ತರೊಂದಿಗೆ ಸಂವಾದ ನಡೆಸಿದ ದಿನೇಶ್ ಅಮಿನ್ ಮಟ್ಟು

ದಾವಣಗೆರೆ, ಜ. 12- ಮಾಧ್ಯಮ ವೃತ್ತಿ ಉದ್ಯಮವಾಗಿ ಪರಿವರ್ತನೆಯಾದಾಗ ಬಂಡವಾಳ ಬರುತ್ತದೆ. ಪತ್ರಕರ್ತರಿಗೆ ವೇತನ ಸಿಗುತ್ತದೆ ಎಂಬ ಸಮಾಧಾನವಿತ್ತು. ಆದರೆ ಇತ್ತೀಚಿನ ಬೆಳವಣಿಗೆಗಳಲ್ಲಿ ಆ ಭರವಸೆಯೂ ಕಾಣುತ್ತಿಲ್ಲ ಎಂದು ಪ್ರಗತಿಪರ ಚಿಂತಕ ದಿನೇಶ್ ಅಮಿನ್ ಮಟ್ಟು ಕಳವಳ ವ್ಯಕ್ತಪಡಿಸಿದರು.



ಇಂದಿಲ್ಲಿ ಜಿಲ್ಲಾ ವರದಿಗಾರರ ಕೂಟದಲ್ಲಿ ಪತ್ರಕರ್ತರೊಂದಿಗೆ ಸಂವಾದ ನಡೆಸಿದ ಅವರು, ಪತ್ರಿಕೋದ್ಯಮ ಲಾಭವಿಲ್ಲದ ಉದ್ಯಮವಾಗಿದೆ. ಮಾಧ್ಯಮದ ಪಾಲಿಗೆ ಅತಿ ಕಷ್ಟದ ದಿನಗಳು ಎದುರಾಗಿವೆ. ಪತ್ರಕರ್ತರ ಸಂಘಗಳೂ ಸಹ ಪತ್ರಕರ್ತರ ರಕ್ಷಣೆ ಬಗ್ಗೆ ಚಿಂತಿಸುತ್ತಿಲ್ಲ ಎಂದು ಹೇಳಿದರು.

ಇಂದು ಪತ್ರಿಕೆಯೊಂದರಲ್ಲಿ ಕಾರ್ಯ ನಿರ್ವಹಿಸುವ ಪತ್ರಕರ್ತನಿಗೆ ನಾಳೆ ಆ ಸಂಸ್ಥೆಯಲ್ಲಿ ತನ್ನ ಕೆಲಸ ಮುಂದುವರೆಯುತ್ತದೆ ಎಂಬ ಭರವಸೆ ಇಲ್ಲವಾಗಿದೆ. ಯಾವುದೋ ಕಂಪನಿ ತನ್ನ ಕೆಲಸಗಾರರನ್ನು ತೆಗೆದು ಹಾಕಿದಾಗ ಸುದ್ದಿ ಮಾಡುವ ಪತ್ರಕರ್ತರು ತಮ್ಮದೇ ಸಹೋದ್ಯೋಗಿಗಳು ಕೆಲಸ ಕಳೆದುಕೊಂಡಾಗ ಬರೆಯಲಾಗುತ್ತಿಲ್ಲ ಎಂದರು.

ಬದುಕು ಸದೃಢವಾದಾಗಿದ್ದಾಗ ಪತ್ರಕರ್ತರು ಆದರ್ಶದ ಬಗ್ಗೆ ಮಾತನಾಡಬಹುದು. ಆದರೆ ಈಗ ಬದುಕುಳಿಯುವುದು ಹೇಗೆ? ಎಂಬ ಪ್ರಶ್ನೆ ಪತ್ರಕರ್ತರಿಗೆ ಎದುರಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಮಾಧ್ಯಮ ಕ್ಷೇತ್ರಕ್ಕೆ ರಾಜಕಾರಣಿಗಳ ಪ್ರವೇಶವಾಗುತ್ತಿರುವುದು ಅತಿ ಅಪಾಯಕಾರಿ ಬೆಳವಣಿಗೆ. ಸಾರ್ವಜನಿಕರ ಅಭಿಪ್ರಾಯಗಳನ್ನೇ ತಿರುಚುವ ಪ್ರಯತ್ನಗಳನ್ನು ರಾಜಕಾರಣಿಗಳ ಒಡೆತನದಲ್ಲಿರುವ ಸಂಸ್ಥೆಗಳು ನಡೆಸುತ್ತಿದ್ದು, ಅದು ಅತಿ ಅಪಾಯಕಾರಿ ಎಂದರು.

ಬೇರೆ ಉದ್ಯಮಗಳ ಬಗ್ಗೆ ಆಸಕ್ತಿ ಇರುವವರು ಮಾಧ್ಯಮ ಕ್ಷೇತ್ರಕ್ಕೆ ಬರುವುದನ್ನು ತಡೆಯಬೇಕು. ಆದರೆ ಪ್ರಸ್ತುತ ದಿನಗಳಲ್ಲಿ ಅದು ಸಾಧ್ಯವಾಗದು ಎಂದು ಅಮಿನ್ ಮಟ್ಟು ಅಭಿಪ್ರಾಯಿಸಿದರು.

ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ. ಆರ್. ಆರಾಧ್ಯ, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಾಡಜ್ಜಿ ಇತರರು ಉಪಸ್ಥಿತರಿದ್ದರು.

# ಸಂಕಷ್ಟದಲ್ಲಿ ಮನರಂಜಿಸುವ ಶ್ರಮಿಕರ ಬದುಕು

ದಾವಣಗೆರೆ, ಜ.12- ವಸ್ತು ಪ್ರದರ್ಶನವನ್ನೇ ನಂಬಿ ಬದುಕು ಕಟ್ಟಿಕೊಳ್ಳುತ್ತಿರುವ ಶ್ರಮಿಕ ವರ್ಗದ ಬದುಕು ಕೊರೊನಾದಿಂದ ಸಂಕಷ್ಟಕ್ಕೆ ಸಿಲುಕಿದ್ದು, ಇವರ ಜೊತೆಗೆ ಮಾಲೀಕರ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಕರ್ನಾಟಕ ಸ್ಟೇಟ್ ಎಕ್ಸಿಬಿಷನ್ ಆರ್ಗನೈಜರ್ಸ್ ಅಂಡ್ ಅಮ್ಯೂಸ್‌ಮೆಂಟ್ಸ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಎ. ಭದ್ರಪ್ಪ ತಿಳಿಸಿದ್ದಾರೆ.



ವಸ್ತು ಪ್ರದರ್ಶನದಲ್ಲಿ ಮನರಂಜನೆ ನೀಡಿ ಸಂತಸವನ್ನುಂಟು ಮಾಡುವ ಈ ವಲಯದ ಅಸಂಘಟಿತ ಕಾರ್ಮಿಕ ಕುಟುಂಬಗಳು ನೋವನ್ನು ಅನುಭವಿಸುತ್ತಿದ್ದು, ಕೊರೊನಾ ಹಿನ್ನೆಲೆಯಲ್ಲಿ ವಸ್ತು ಪ್ರದರ್ಶನ ಸ್ತಬ್ಧವಾಗಿ ಇದೀಗ ಒಂದು ಹೊತ್ತಿನ ಊಟಕ್ಕೂ ಪರಿತಪಿಸುತ್ತಿವೆ. ಜೀವನೋಪಾಯಕ್ಕಾಗಿ ಕೆಲವರು ಬೇರೆಡೆ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದು, ಮತ್ತೆ ಕೆಲವರು ಕೂಲಿ ಕೆಲಸ ಸಿಗದೇ ಭಿಕ್ಷೆ ಬೇಡಲು ಮುಂದಾಗಿದ್ದಾರೆ ಎಂದು ವಸ್ತುಪ್ರದರ್ಶನ ಆಯೋಜನೆಯ ಸ್ಥಳದಲ್ಲಿ ಇಂದು ಕರೆಯಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಈ ವರ್ಗದ ನೋವನ್ನು ವ್ಯಕ್ತಪಡಿಸಿದರು.

ಈ ವಸ್ತು ಪ್ರದರ್ಶನದ ಮೇಲೆ ಅವಲಂಬಿತರಾದವರ ಕಡೆ ಗಮನ ಹರಿಸಲಿಲ್ಲ. ಇದುವರೆಗೂ ನಾವುಗಳು ನಮ್ಮಗಳ ಸಂಕಷ್ಟಕ್ಕೆ ಸರ್ಕಾರ ಬಳಿ ಮನವಿ ಮಾಡಿರಲಿಲ್ಲ. ಹೀಗಾಗಿ ಕೊರೊನಾ ಸಂದರ್ಭದಲ್ಲಿ ಸರ್ಕಾರವೂ ನಮ್ಮನ್ನು ಪರಿಗಣಿಸಿಲ್ಲ. ಕೊರೊನಾದಿಂದ ಬಂದ ಸಂಕಷ್ಟದಿಂದ ಪಾರಾಗುವ ನಿಟ್ಟಿನಲ್ಲಿ ಈಗ ನೂತನವಾಗಿ ಈ ಸಂಘವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಹೇಳಿದರು.

ಹಿಂದೆ ಪ್ರದರ್ಶನಕ್ಕೆ ಅಗ್ನಿಶಾಮಕ ದಳದಿಂದ ಅನುಮತಿ ಪಡೆದು ದಿನಕ್ಕೆ 10 ಸಾವಿರ ಶುಲ್ಕ ಭರಿಸಲಾಗುತ್ತಿತ್ತು. ಈಗ 50 ಸಾವಿರಕ್ಕೆ ಶುಲ್ಕ ಏರಿಕೆ ಮಾಡಲಾಗಿದ್ದು, ಇದು ಪ್ರದರ್ಶನಕಾರರಿಗೆ ತುಂಬಲಾರದ ಹೊರೆಯಾಗಿದೆ. ಇದು ಕಡಿಮೆ ಮಾಡಬೇಕು. ಮುಜರಾಯಿ ಇಲಾಖೆಗೆ ಒಳಪಟ್ಟ ದೇವಾಲಯಗಳ ಜಾತ್ರಾ ಮಹೋತ್ಸವದಲ್ಲಿ ಇಲಾಖೆಯಿಂದ ಪರವಾನಿಗೆ ಪಡೆದ ಪ್ರದರ್ಶನಕಾರರಿಗೆ ಮಾತ್ರ ವಸ್ತು ಪ್ರದರ್ಶನಕ್ಕೆ ಅವಕಾಶ ನೀಡುವಂತೆ ಪರಿಗಣಿಸಬೇಕು. ಬೇರೆಯವರಿಗೆ ಅವಕಾಶ ಕಲ್ಪಿಸಬಾರದು. ಒಂದು ಕಡೆ ಪ್ರದರ್ಶನಕ್ಕೆ ಅನುಮತಿ ದೊರಕಬೇಕಾದರೆ ಹತ್ತಾರು ಇಲಾಖೆಗಳಿಗೆ ಅಲೆದಾಡುವಂತಾಗಿದ್ದು, ಪ್ರದರ್ಶನದ ಪರವಾನಿಗೆಯನ್ನು ಸಿಂಗಲ್ ವಿಂಡೋ ಅಡಿ ಅವಕಾಶ ನೀಡಬೇಕು. ಈ ಬೇಡಿಕೆಗಳನ್ನು ಇಟ್ಟುಕೊಂಡು ಮುಖ್ಯಮಂತ್ರಿಗಳಿಗೆ ಶೀಘ್ರವೇ ಮನವಿ ಸಲ್ಲಿಸಲಾಗುವುದು ಎಂದರು.

ಫೆ.5ರಿಂದ ನಗರದಲ್ಲಿ ವಸ್ತುಪ್ರದರ್ಶನ ಆಯೋಜಿಸಲಾಗುತ್ತಿದೆ. ಕೊರೊನಾ ಸಂಕಷ್ಟದ ಸಮಯದಲ್ಲಿ ವಸ್ತು ಪ್ರದರ್ಶನ ವೀಕ್ಷಣೆಗೆ ಜನರು ಸಹ ಬರುವುದು ಕಡಿಮೆಯಾಗಿದ್ದು, ವಸ್ತುಪ್ರದರ್ಶನ ಆಯೋಜಿಸಿದರೆ ಜನರು ಬರುತ್ತಾರೆಯೇ ಎಂಬ ಆತಂಕವುಂಟಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಪಾಟೀಲ್, ಉಪಾಧ್ಯಕ್ಷ ಸಿ.ಕೆ. ದಿನೇಶ್ ಕುಮಾರ್, ಜಂಟಿ ಕಾರ್ಯದರ್ಶಿ ಶಬ್ಬೀರ್ ಖಾನ್, ಸಂಘಟನಾ ಕಾರ್ಯದರ್ಶಿ ಶ್ರೀನಿವಾಸಯ್ಯ, ವಕ್ತಾರ ಚೈತನ್ಯ ಕುಮಾರ್ ಅಯ್ಯಂಗಾರ್, ಸಮಿತಿಯ ಎಸ್. ಕುಮಾರ್, ಅಚ್ಚು, ವೀರಣ್ಣ ಸುರ್ವೆ, ಮಹಮದ್ ಕಬೀರ್ ಸೇರಿದಂತೆ ಇತರರು ಇದ್ದರು.

# ನದಿ ಸ್ವಚ್ಛತೆಯೊಂದಿಗೆ ವಿವೇಕಾನಂದರ ಜಯಂತಿ ಆಚರಣೆ



ಹರಿಹರ, ಜ.12- ಸ್ವಾಮಿ ವಿವೇಕಾನಂದರ 158ನೇ ಜಯಂತಿ ಹಾಗೂ ರಾಷ್ಟ್ರೀಯ ಯುವಕರ ದಿನಾಚರಣೆ ಯನ್ನು 'ನನ್ನ ಊರು ನನ್ನ ಹೊಣೆ' ಬಳಗದ ವತಿಯಿಂದ ನಗರದ ಶ್ರೀ ರಾಘವೇಂದ್ರ ಸ್ವಾಮಿ ದೇವಾಲಯದ ಹಿಂಭಾಗದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿಯನ್ನು ಸ್ವಚ್ಛಗೊಳಿಸುವ ಮೂಲಕ ಆಚರಿಸಿದರು.

ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಸಂಸದ ಜಿ.ಎಂ. ಸಿದ್ದೇಶ್ವರ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ನಗರಸಭೆ ಆಯುಕ್ತ ಉದಯ ಕುಮಾರ್ ಹಾಗೂ ನಗರಸಭೆ ಸದಸ್ಯರು 'ನನ್ನ ಊರು ನನ್ನ ಹೊಣೆ' ಬಳಗದ ಸದಸ್ಯರು ಈ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದರು.

## ಮಾಗಾನಹಳ್ಳಿ ಕೋಡಿ ಕ್ಯಾಂಪ್‌ನಲ್ಲಿ ಇಂದು ಅಮಾವಾಸ್ಯೆ ಪೂಜೆ



ದಾವಣಗೆರೆ ಸಮೀಪದ ಮಾಗಾನಹಳ್ಳಿ, ಕಂಚಿಕೆರೆ ರಸ್ತೆಯ ಕೋಡಿ ಕ್ಯಾಂಪ್‌ನಲ್ಲಿರುವ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ 7 ಗಂಟೆಗೆ ಅಭಿಷೇಕ, ಪೂಜೆ ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್‌ನ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

## ನಗರದ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅಮವಾಸ್ಯೆ ಪೂಜೆ



ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಎಳ್ಳು ಅಮವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ದೇವರಿಗೆ ಇಂದು ರುದ್ರಾಭಿಷೇಕ, ಶ್ರೀ ಮೃತ್ಯುಂಜಯ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಶ್ರೀಮತಿ ಚೂಡಾಮಣಿ ಮತ್ತು ಆರ್.ಜಿ. ನಾಗೇಂದ್ರ ಪ್ರಕಾಶ್ ಶ್ರೇಷ್ಠಿ, ಶ್ರೀಮತಿ ಲಕ್ಷ್ಮಿ ಮತ್ತು ಆರ್.ಎನ್. ಅಜಿತ್, ಶ್ರೀಮತಿ ನಾಗಮಣಿ ಮತ್ತು ಕೆ.ಜಿ. ಸುಗಂಧರಾಜ್ ಶೆಟ್ರು ಪೂಜಾ ಕಾರ್ಯಕ್ರಮದ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನದ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಸಾರ್ವಜನಿಕ ಸ್ಥಳಗಳಲ್ಲಿ ಕಸ : ವಾಣಿಜ್ಯ ಅಂಗಡಿಗಳಿಗೆ ದಂಡ

ದಾವಣಗೆರೆ,ಜ.12- ನಿಗದಿತ ಸ್ಥಳದಲ್ಲಿ ಕಸ ವಿಲೇವಾರಿ ಮಾಡದೇ ಎಲ್ಲೆಂದರಲ್ಲೇ ಕಸ ಹಾಕಿದ ಆರೋಪದಲ್ಲಿ ವಾಣಿಜ್ಯ ಅಂಗಡಿಗಳ ಮೇಲೆ ದಾಳಿ ಮಾಡಿರುವ ಪಾಲಿಕೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ದಂಡ ವಿಧಿಸುವುದರ ಮೂಲಕ ಕ್ರಮ ಕೈಗೊಂಡಿದ್ದಾರೆ.



ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ನಗರಾಭಿವೃದ್ಧಿ ಖಾತೆ ಸಚಿವ ಭೈರತಿ ಬಸವರಾಜ್ ಅವರು ನಗರದ ವಿವಿಧ ಭಾಗಗಳಲ್ಲಿ ನಿನ್ನೆ ಸಂಚರಿಸಿದ ಸಂದರ್ಭದಲ್ಲಿ ಕಂಡು ಬಂದ ಕಸದ ರಾಶಿ ಬಗ್ಗೆ ತರಾಟೆಗೆ ತೆಗೆದುಕೊಂಡು ಆದೇಶಿಸಿದ ಹಿನ್ನೆಲೆಯಲ್ಲಿ ನಗರ ಪಾಲಿಕೆ ಈ ಕ್ರಮ ಜರುಗಿಸಿದೆ. ವಿವಿಧ ಬಡಾವಣೆಗಳಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ ಕಂಡು ಬಂದ ಕಸದ ರಾಶಿಯಲ್ಲಿ ದೊರೆತ ಚೀಟಿ, ಬಿಲ್ಲುಗಳು, ಹಾಳೆ, ಬ್ಯಾಗುಗಳಲ್ಲಿ ಕಂಡು ಬಂದ ಹೆಸರು ಗಳಿರುವ ಅಂಗಡಿಗಳನ್ನು ಪತ್ತೆ ಮಾಡಿಕೊಂಡು ಹೋಗಿ ದಾಳಿ ಮಾಡಿದ ಪಾಲಿಕೆ ಸಿಬ್ಬಂದಿಗಳು, ಅವುಗಳನ್ನು ತೋರಿಸಿ ಈ ಆಧಾರದ ಮೇಲೆ ದಂಡ ಹಾಕಿದ್ದಾರೆ.

ಶಾಮನೂರು ರಸ್ತೆ, ಬಿಐಇಟಿ ರಸ್ತೆ, ಬಾಯ್ಸ್ ಹಾಸ್ಟೆಲ್ ರಸ್ತೆಗಳಲ್ಲಿನ ವಾಣಿಜ್ಯ ಅಂಗಡಿಗಳು ಕಸವನ್ನು ಕಸ ಸಂಗ್ರಹಣಾ ವಾಹನಗಳಿಗೆ ಹಾಕದೇ ಸಾರ್ವಜನಿಕ ಸ್ಥಳಗಳಲ್ಲಿ ಎಸೆಯಲಾಗಿದೆ ಎಂದು ಆರೋಪಿಸಿ ದಂಡ ಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿನ್ನೆ ಮತ್ತು ಇಂದು ಈ ಕ್ರಮ ಕೈಗೊಳ್ಳಲಾಗಿದ್ದು, 8-10 ಅಂಗಡಿಗಳಿಗೆ ಹಾಕಿದ್ದ ದಂಡದಲ್ಲಿ 10,300 ರೂ. ಗಳನ್ನು ವಸೂಲಿ ಮಾಡಲಾಗಿದೆ ಎಂದು ಅಧಿಕಾರಿಗಳು 'ಜನತಾವಾಣಿ'ಗೆ ವಿವರಿಸಿದ್ದಾರೆ. ಉಳಿದ ಭಾಗಗಳಲ್ಲೂ ಇದೇ ರೀತಿ ದಾಳಿ ಮಾಡುವುದಾಗಿ ಅವರು ವಿವರಿಸಿದ್ದಾರೆ.

ಪರಿಸರ ಅಭಿಯಂತರ ಬಸವರಾಜ್, ಹಿರಿಯ ಆರೋಗ್ಯ ನಿರೀಕ್ಷಕ ಪ್ರಕಾಶ್, ಆರೋಗ್ಯ ನಿರೀಕ್ಷಕರುಗಳಾದ ಹರೀಶ್, ಮಹಾಂತೇಶ್, ಲಕ್ಷ್ಮಿ, ರಾಜಪ್ಪ, ಶ್ರೀಧರ ನಾಯ್ಕ ಮತ್ತಿತರರು ದಾಳಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

## ದೇವಾಂಗ ಸಮಾಜದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜ.12- ದೇವಾಂಗ ಸಂಘದಿಂದ ಇದೇ ದಿನಾಂಕ 24 ರಂದು ಬೆಳಿಗ್ಗೆ 11:30 ಕ್ಕೆ ಸಮಾಜದ ವಿದ್ಯಾರ್ಥಿಗಳಿಗೆ ನಗರದ ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ದೇವಾಂಗ ವಿದ್ಯಾರ್ಥಿ ನಿಲಯದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ಜಿಲ್ಲೆಯ ದೇವಾಂಗ ಸಮಾಜದ ವಿದ್ಯಾರ್ಥಿಗಳು ಇದೇ ದಿನಾಂಕ 24ರೊಳಗಾಗಿ ಅರ್ಜಿಯೊಂದಿಗೆ ಅಂಕಪಟ್ಟಿ, ಟಿಸಿ ಮತ್ತು 2 ಪಾಸ್‌ಪೋರ್ಟ್ ಭಾವಚಿತ್ರಗಳನ್ನು ಲಗತ್ತಿಸಿ ದೇವಾಂಗ ವಿದ್ಯಾರ್ಥಿ ನಿಲಯಕ್ಕೆ ಸಲ್ಲಿಸುವಂತೆ ಸಂಘದ ಅಧ್ಯಕ್ಷ ಜಿ.ಹೆಚ್. ರಾಮಚಂದ್ರ ತಿಳಿಸಿದ್ದಾರೆ. ವಿವರಕ್ಕೆ ಮೊ: 9972801195, 9448812703 ಗೆ ಸಂಪರ್ಕಿಸಬಹುದು.

# ಪಂಚಮಸಾಲಿ ಪೀಠದಲ್ಲಿ ನಾಳೆ ಹರ ಜಾತ್ರೆ : ಬಂದೋಬಸ್ತ್ ಪರಿಶೀಲನೆ



ಮಲೇಬೆನ್ನೂರು, ಜ.12- ಹರಿಹರದ ಪಂಚಮಸಾಲಿ ಪೀಠದಿಂದ ನಾಡಿದ್ದು ನಾಡಿದ್ದು ದಿನಾಂಕ 14 ಮತ್ತು 15ರಂದು ಹರ ಜಾತ್ರಾ ಮಹೋತ್ಸವ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯವರು ಸೂಕ್ತ ಬಂದೋಬಸ್ತ್ ಮಾಡುವ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳು ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿಯವರೊಂದಿಗೆ ಇಂದು ಸ್ಥಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ವರಿಷ್ಠಾಧಿಕಾರಿ ರಾಜೀವ್, ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ, ವೃತ್ತ ನಿರೀಕ್ಷಕ ಸತೀಶ್ ಕುಮಾರ್ ಯು, ಪಿಎಸ್‌ಐಗಳಾದ ವೀರಬಸಪ್ಪ ಕುಸಲಾಪುರ, ಡಿ ರವಿಕುಮಾರ್, ಚಂದ್ರಶೇಖರ್, ಕರಿಬಸಪ್ಪ, ಬಿ. ಲೋಕೇಶ್ ಹಾಗೂ ಇತರರು ಇದ್ದರು.

# ಗ್ರಾ.ಪಂ.ಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ದಿನಾಂಕ ನಿಗದಿ

ದಾವಣಗೆರೆ, ಜ.12-ಜಿಲ್ಲೆಯ 6 ತಾಲ್ಲೂಕುಗಳ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ (ಚುನಾವಣೆ ನಡೆದಿರುವ ಮತ್ತು ಅವಧಿ ಮುಗಿಯದ) 2020 ರಿಂದ 30 ತಿಂಗಳ ಮೊದಲನೇ ಅವಧಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ನಿಗದಿಪಡಿಸಲು ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಗ್ರಾ.ಪಂ ಅಧ್ಯಕ್ಷ - ಉಪಾಧ್ಯಕ್ಷರ ಮೀಸಲಾತಿ ಪ್ರಕ್ರಿಯೆಯು ಗ್ರಾ.ಪಂ ಸದಸ್ಯರ ಸಮಕ್ಷಮದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ, ತುಂಗಭದ್ರಾ ಸಭಾಂಗಣದಲ್ಲಿ ಕೈಗೊಳ್ಳಲಾಗುವುದು.

ಇದೇ ದಿನಾಂಕ 16 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಹರಿಹರ ತಾಲ್ಲೂಕಿನ 24 ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಯ ಮೀಸಲಾತಿ ನಿಗದಿ ಮಾಡಲಾಗುವುದು ಹಾಗೂ ಮಧ್ಯಾಹ್ನ 2 ಗಂಟೆಗೆ ಹೊನ್ನಾಳಿ ತಾಲ್ಲೂಕಿನ 29 ಗ್ರಾಮ ಪಂಚಾಯಿತಿಗಳ ಅಧ್ಯಕ್ಷ-ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ ನಿಗದಿ ಮಾಡಲಾಗುವುದು.

ದಿನಾಂಕ 17 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಜಗಳೂರು ತಾಲ್ಲೂಕಿನ 22 ಗ್ರಾಮ ಪಂಚಾಯಿತಿಗಳ ಅಧ್ಯಕ್ಷ - ಉಪಾಧ್ಯಕ್ಷರ ಹುದ್ದೆಯ ಹಾಗೂ ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ತಾಲ್ಲೂಕಿನ 42 ಗ್ರಾಮ ಪಂಚಾಯಿತಿಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಯ ಮೀಸಲಾತಿ ನಿಗದಿ ಮಾಡಲಾಗುವುದು.

ದಿನಾಂಕ 18ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನ್ಯಾಮತಿ ತಾಲ್ಲೂಕಿನ 17 ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಗಳನ್ನು ಹಾಗೂ ಮಧ್ಯಾಹ್ನ 1 ಗಂಟೆಗೆ ಚನ್ನಗಿರಿ ತಾಲ್ಲೂಕಿನ 61 ಗ್ರಾಮ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿಯನ್ನು ನಿಗದಿ ಮಾಡಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

## ಹೊಸದುರ್ಗದಲ್ಲಿ ಶಿಬಿರ

ದಾವಣಗೆರೆ, ಜ.12- ಸುನ್ನಿ ದಾವತೇ ಇಸ್ಲಾಮಿ ಸಮಿತಿ ವತಿಯಿಂದ ಇದೇ ದಿನಾಂಕ 15 ರಿಂದ 7 ದಿನಗಳ ಕಾಲ ಧಾರ್ಮಿಕ ಫೈಜಾನೆ ನಮಾಜ್ ಕೋರ್ಸ್ ತರಬೇತಿ ಹೊಸದುರ್ಗದಲ್ಲಿ ನಡೆಯಲಿದೆ. ಇದರಲ್ಲಿ ನಮಾಜ್, ವಜೂ, ಗುಸುಲ್ ಸೇರಿದಂತೆ ಇಸ್ಲಾಂ ಧಾರ್ಮಿಕ ಪ್ರವಚನಗಳ ಬಗ್ಗೆ ತರಬೇತಿ ನೀಡಲಾಗುವುದು.

# ನಗರದಲ್ಲಿ ಇನ್ನರ್‌ವ್ಹೀಲ್ ದಿನಾಚರಣೆ

ದಾವಣಗೆರೆ, ಜ.12- ಸ್ಥಳೀಯ ವಿದ್ಯಾನಗರ ಇನ್ನರ್‌ವ್ಹೀಲ್ ಸಂಸ್ಥೆಯ ಸಂಸ್ಥಾಪಕ ದಿನವನ್ನು ಶ್ರೀಮತಿ ಸಾವಿತ್ರಿ ನೆಸ್ವಿ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.



ಮುಖ್ಯ ಅತಿಥಿಗಳಾಗಿ ಚಿತ್ರದುರ್ಗದ ಶ್ರೀಮತಿ ಜ್ಯೋತಿ ಲಕ್ಷ್ಮಣ್ (ವಿಡಿಸಿ) ಆಗಮಿಸಿದ್ದರು. ಅಂದು ಕೊರೊನಾ ವಾರಿಯರ್ ಆಗಿದ್ದ ಅರಿವಳಿಕೆ ತಜ್ಞರಾದ ಡಾ॥ ಎ.ಎಂ. ಶಿಲ್ಪಾಶ್ರೀ, ವೈದ್ಯಕೀಯ ಶುಶ್ರೂಷಕಿಯರಾದ ಶ್ರೀಮತಿ ಮೀನಾಕ್ಷಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಅವರು ಕೊರೊನಾ ಸೋಂಕಿತರಿಗೆ ತಾವು ಸಲ್ಲಿಸಿದ ಸೇವೆಯ ಅನುಭವವನ್ನು ಹಂಚಿಕೊಂಡರು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸುಜಾತ ಚಂದ್ರಾಚಾರ್ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪರಿಚಯ ಮಾಡಿಕೊಟ್ಟರು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಅಧ್ಯಕ್ಷ ಎನ್.ಬಿ. ಮೃತ್ಯುಂಜಯಪ್ಪ ಮತ್ತು ರೋಟರಿಯ ಉಪ ರಾಜ್ಯಪಾಲರಾದ ಹೆಚ್.ಎಂ. ಚಂದ್ರಾಚಾರ್ ಉಪಸ್ಥಿತರಿದ್ದರು

## ಜಗಳೂರಿನಲ್ಲಿ ಇಂದು-ನಾಳೆ ಸೈಯದ್ ಚಮನ್ ಷಾವಲಿ ಉರುಸ್

ಜಗಳೂರು, ಜ.11 - ಪಟ್ಟಣದ ಪ್ರಸಿದ್ಧ ಹಜರತ್ ಸೈಯದ್ ಚಮನ್‌ಷಾವಲಿ ಅವರ 209 ನೇ ವರ್ಷ ದ ಉರುಸ್ ಇದೇ ದಿನಾಂಕ 14 ರಂದು ಗುರುವಾರ ನಡೆಯಲಿದೆ. ನಾಡಿದ್ದು ದಿನಾಂಕ 13 ರಂದು ಬುಧವಾರ ಸಂದಲ್ ಅರ್ಪಣೆ ಕಾರ್ಯಕ್ರಮ ನೆರವೇರಲಿದೆ ಎಂದು ದರ್ಗಾ ಕಮಿಟಿಯವರು ತಿಳಿಸಿದ್ದಾರೆ.

## ಅಮೆರಿಕದ ಅಪಘಾತದಲ್ಲಿ ಮೃತಪಟ್ಟ ಯುವತಿಯ ಅಸ್ಥಿ ನಾಳೆ ನಗರಕ್ಕೆ



ದಾವಣಗೆರೆ, ಜ.12- ಕಳೆದ ತಿಂಗಳಲ್ಲಿ ಅಮೆರಿಕದಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟ ನಗರದ ಸೌಮ್ಯ ಅವರ ಅಸ್ಥಿಯನ್ನು ನಾಡಿದ್ದು ದಿನಾಂಕ 14 ರ ಗುರುವಾರ ನಗರಕ್ಕೆ ತರಲಾಗುತ್ತಿದೆ.

ದಾವಣಗೆರೆ ನಿವೃತ್ತ ರೈಲ್ವೆ ಸ್ಟೇಷನ್ ಮೇನೇಜರ್ ಹೆಚ್.ಜಿ.ಮುರಿಗೇಂದ್ರಪ್ಪ ಅವರ ಹಿರಿಯ ಪುತ್ರಿ ಇಂಜಿನಿಯರ್ ಸೌಮ್ಯ (29) ಅವರು ಪತಿ ನಿರಂಜನ್ ಅವರೊಂದಿಗೆ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದು, ವರ್ಷಾಂತ್ಯದ ರಜೆಯಲ್ಲಿ ಹವಾಯಿ ದ್ವೀಪಕ್ಕೆ ತೆರಳಿ ವಿಹರಿಸುತ್ತಿರುವಾಗ, ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಆನಂತರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಮೃತರ ಅಂಗಾಂಗಳನ್ನು ದಾನ ಮಾಡಲಾಗಿದ್ದು, ಕೆಲ ತಾಂತ್ರಿಕ ಕಾರಣಗಳಿಂದ ಪಾರ್ಥಿವ ಶರೀರವನ್ನು ಇಲ್ಲಿಗೆ ತರಲು ಸಾಧ್ಯವಾಗಲಿಲ್ಲ. ಇದೀಗ ಮೃತ ಸೌಮ್ಯ ಅವರ ಪತಿ ನಿರಂಜನ್ ಅವರು ಅಸ್ಥಿಯನ್ನು ನಾಡಿದ್ದು ಗುರುವಾರ ತರುತ್ತಿದ್ದು, ತರಳಬಾಳು ಬಡಾವಣೆಯಲ್ಲಿರುವ ಮುರಿಗೇಂದ್ರಪ್ಪನವರ ಮನೆಯಲ್ಲಿ ಅಂದು ಬೆಳಿಗ್ಗೆ 10 ಗಂಟೆಗೆ ಪೂಜೆ ನಂತರ ಅಂತಿಮ ವಿಧಿ-ವಿಧಾನಗಳಿಗಾಗಿ ಮೃತರ ಪತಿಯ ಊರಾದ ಕಡೂರು ತಾಲ್ಲೂಕಿನ ಕೆದಿಗೆರೆ ಗ್ರಾಮಕ್ಕೆ ಒಯ್ಯಲಾಗುವುದು ಎಂದು ಸೌಮ್ಯ ಅವರ ಕಿರಿಯ ಸಹೋದರಿ ಕಾವ್ಯ ತಿಳಿಸಿದ್ದಾರೆ.

## ಹೆಲ್ಪ್ ಲೈನ್ ಸುಭಾನ್ ಅವರಿಗೆ ಜಿಲ್ಲಾ ಪೊಲೀಸ್ ಇಲಾಖೆ ಸನ್ಮಾನ



ದಾವಣಗೆರೆ, ಜ.12- ಹೆಲ್ಪ್ ಲೈನ್ ಸುಭಾನ್ ಎಂದೇ ಹೆಸರಾಗಿರುವ ನಗರದ ಸಾಮಾಜಿಕ ಸೇವಾ ಕಾರ್ಯಕರ್ತ ಆರ್.ಡಿ. ಸುಭಾನ್ ಸಾಬ್ ನದಾಫ್ ಅವರ ಸಾಮಾಜಿಕ ಕಳಕಳಿ, ಸೇವೆಯನ್ನು ಗುರ್ತಿಸಿ, ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಪ್ರಶಂಸನೀಯ ಪತ್ರ ನೀಡಿ ಸನ್ಮಾನಿಸಲಾಗಿದೆ.

ಜಿಲ್ಲೆಯ ವಿವಿಧ ಭಾಗಗಳಲ್ಲಿನ ಅನೇಕ ಅಪಘಾತ ಮತ್ತು ಇನ್ನಿತರೆ ಅನಾಹುತಗಳು ಸಂಭವಿಸಿದ ಸಮಯದಲ್ಲಿ ಸ್ಥಳಕ್ಕೆ ತೆರಳಿ ಅವರ ಜೀವ ರಕ್ಷಿಸಿ, ಹತ್ತಿರದ ಆಸ್ಪತ್ರೆಗೆ ದಾಖಲಿಸಿ, ಪ್ರಾಣಾಪಾಯದಿಂದ ಕಾಪಾಡಿರುವುದಲ್ಲದೆ, ಸಂಕಷ್ಟದ ವೇಳೆ ಅವರು ರಕ್ತ ದಾನ ಮಾಡಿದ್ದಾರೆ. 46 ಬಾರಿ ರಕ್ತದಾನ ಮಾಡಿ ರಾಜ್ಯ ಸರ್ಕಾರದಿಂದ ಜೀವ ರಕ್ಷಕ ಪ್ರಶಸ್ತಿ ಪಡೆದಿದ್ದಾರೆ.

ನಿರ್ಗತಿಕರಿಗೆ ಮತ್ತು ಅಸಹಾಯಕರಿಗೆ ಹೊದಿಕೆ, ಹಾಸಿಗೆ ಹಾಗೂ ಉಡಲು ಬಟ್ಟೆ ಮತ್ತು ಆಹಾರ ಸಾಮಗ್ರಿಗಳನ್ನು ಹಂಚಿಕೆ ಮಾಡಿರುತ್ತಾರೆ. ಅವರ ಸಮಾಜ ಸೇವೆಯನ್ನು ಪರಿಗಣಿಸಿ ಹಾಗೂ ಇಲಾಖೆಯೊಂದಿಗೆ ಕೈ ಜೋಡಿಸಿ ಇತರರಿಗೆ ಮಾದರಿಯಾಗಿರುವುದನ್ನು ಗುರ್ತಿಸಿ, ಸನ್ಮಾನಿಸಲಾಗುತ್ತಿದೆ ಎಂದು ಪ್ರಶಂಸನೀಯ ಪತ್ರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ತಿಳಿಸಿದ್ದಾರೆ.

## ಉತ್ಪಾದನೆ, ಗಣಿಗಾರಿಕೆ ಹಿನ್ನಡೆ : ಕೈಗಾರಿಕಾ ಬೆಳವಣಿಗೆ ದರ ಶೇ.1.9 ರಷ್ಟು ಕುಸಿತ

ನವದೆಹಲಿ, ಜ.12 – ನವೆಂಬರ್ ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ದರ ಶೇ.1.9ರಷ್ಟು ಕುಸಿದಿದೆ. ಎರಡು ತಿಂಗಳ ನಂತರ ಈ ವಲಯ ಋಣಾತ್ಮಕ ಕುಸಿತ ಕಂಡಿದೆ. ಉತ್ಪಾದನೆ ಹಾಗೂ ಗಣಿಗಾರಿಕೆ ವಲಯಗಳ ಹಿನ್ನಡೆಯೇ ಇದಕ್ಕೆ ಕಾರಣವಾಗಿದೆ. ಈ ಹಿಂದೆ ನವೆಂಬರ್ 2020ರಲ್ಲಿ ಉತ್ಪಾದನಾ ವಲಯದ ಬೆಳವಣಿಗೆ ದರ ಶೇ.1.7ರಷ್ಟು ಕುಸಿದಿದೆ. ಗಣಿಗಾರಿಕೆ ವಲಯದಲ್ಲಿ ಶೇ.7.3ರ ಕುಸಿತವಾಗಿದೆ.

## ಹರಿಹರಕ್ಕೆ ನಾಳೆ ವಸತಿ ಸಚಿವ ಸೋಮಣ್ಣ

ದಾವಣಗೆರೆ, ಜ.10- ವಸತಿ ಖಾತೆ ಸಚಿವ ವಿ.ಸೋಮಣ್ಣ ನಾಡಿದ್ದು ದಿನಾಂಕ 14 ರ ಗುರುವಾರ ಹರಿಹರ ತಾಲ್ಲೂಕಿನಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಅಂದು ಬೆಳಿಗ್ಗೆ 10.30 ಕ್ಕೆ ಹರಿಹರಕ್ಕೆ ಆಗಮಿಸಿ ಸಾರ್ವಜನಿರ ಭೇಟಿ ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವರು. ನಂತರ ಬಿಜೆಪಿ ತಾಲ್ಲೂಕು ಕಚೇರಿಗೆ ಭೇಟಿ ನೀಡುವರು. ಬೆಳಿಗ್ಗೆ 11.30 ಕ್ಕೆ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಆಯೋಜಿಸಲಾಗಿರುವ 'ಹರ ಜಾತ್ರಾ ಮಹೋತ್ಸವ-2021' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಸಚಿವರ ವಿಶೇಷ ಕರ್ತವ್ಯಾಧಿಕಾರಿ ಟಿ.ಎನ್.ರವಿಪ್ರಕಾಶ್ ತಿಳಿಸಿದ್ದಾರೆ.

## ಶಿಕ್ಷಕನ ಮನೆಯಲ್ಲಿ ಕಳ್ಳತನ : ಚಿನ್ನ, ನಗದು ಕಳವು

ದಾವಣಗೆರೆ, ಜ.12- ಶಿಕ್ಷಕರೋರ್ವರ ಮನೆಯಲ್ಲಿ ಕಳ್ಳತನ ನಡೆದಿದ್ದು, 2 ಲಕ್ಷದ 3 ಸಾವಿರ ಮೌಲ್ಯದ 37 ಗ್ರಾಂ ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಸವನಾಳ್ ಗೊಲ್ಲರಹಟ್ಟಿ ಗ್ರಾಮದಲ್ಲಿ ಮಂಗಳವಾರ ಹಾಡಹಗಲೇ ನಡೆದಿದೆ. ನೇರ್ಲಿಗೆ ಗ್ರಾಮದಲ್ಲಿ ಶಿಕ್ಷಕರಾಗಿರುವ ಮಲ್ಲೇಶನಾಯ್ಕ ಕೆಲಸಕ್ಕೆ ಹೋಗಿದ್ದರು. ಅವರ ತಾಯಿ ಮತ್ತು ಮಗಳು ಹೊಲದಲ್ಲಿ ನಾಟಿ ಮಾಡಲು ಹೋಗಿದ್ದರು.

ಮನೆ ಸಮೀಪವೇ ಕೀಲಿ ಇಟ್ಟಿದ್ದನ್ನು ಗಮನಿಸಿದವರೇ ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ. ಈ ಸಂಬಂಧ ದಾವಣಗೆರೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾರ್ತಿಕ ದೀಪೋತ್ಸವಕ್ಕೆ ಎಸ್ಸೆಸ್ಸೆಂ ಚಾಲನೆ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಮಂಗಳವಾರ ಸಂಜೆ ನಡೆದ ಕಾರ್ತಿಕ ದೀಪೋತ್ಸವದಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವರೂ ಆದ ದೇವಸ್ಥಾನ ಟ್ರಸ್ಟ್ ಕಾರ್ಯಾಧ್ಯಕ್ಷ ಶಾಮನೂರು ಮಲ್ಲಿಕಾರ್ಜುನ್ ಅವರು ಶ್ರೀ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಕಾರ್ತಿಕ ದೀಪೋತ್ಸವಕ್ಕೆ ಚಾಲನೆ ನೀಡಿದರು.














JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte